# ಉಪದಾನ ಸಂದಾಯ ಅಧಿನಿಯಮ, 1972

**(1972ರ ಅಧಿನಿಯಮ ಸಂಖ್ಯೆ 39)**

[21ನೇ ಆಗಸ್ಟ್ 1972]

ಕಾರ್ಖಾನೆಗಳು, ಗಣಿಗಳು, ತೈಲ ಕ್ಷೇತ್ರಗಳು, ನೆಡುತೋಪುಗಳು, ಬಂದರುಗಳು, ರೈಲ್ವೆ ಕಂಪನಿಗಳು, ಅಂಗಡಿಗಳು ಅಥವಾ ಇತರ ಕಾರ್ಯಸಂಸ್ಥೆಗಳಲ್ಲಿ ತೊಡಗಿರುವ ನಿಯೋಜಿತರಿಗೆ ಉಪದಾನವನ್ನು ಸಂದಾಯ ಮಾಡುವ ಪರಿಯೋಜನೆಯ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೂರನೇ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿತವಾಗತಕ್ಕುದು:-

1. ಚಿಕ್ಕ ಹೆಸರು, ವ್ಯಾಪ್ತಿ, ಅನ್ವಯ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಉಪದಾನ ಸಂದಾಯ ಅಧಿನಿಯಮ, 1972 ಎಂದು ಕರೆಯತಕ್ಕುದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ:

ಪರಂತು, ನೆಡುತೋಪುಗಳು ಅಥವಾ ಬಂದರುಗಳಿಗೆ ಸಂಬಂಧಿಸುವಷ್ಟರಮಟ್ಟಿಗೆ, ಇದು ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ವ್ಯಾಪ್ತವಾಗತಕ್ಕುದಲ್ಲ.

(3) ಈ ಅಧಿನಿಯಮವು -

(ಎ) ಪ್ರತಿಯೊಂದು ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು ಮತ್ತು ರೈಲ್ವೆ ಕಂಪನಿ;

(ಬಿ) ಒಂದು ರಾಜ್ಯದಲ್ಲಿರುವ ಯಾವ ಅಂಗಡಿಗಳಲ್ಲಿ ಅಥವಾ ಕಾರ್ಯಸಂಸ್ಥೆಗಳಲ್ಲಿ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಯಾವುದೇ ದಿನದಂದು ಹತ್ತು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ನಿಯೋಜಿತರಾಗಿರುವರೋ ಅಥವಾ ನಿಯೋಜಿತರಾಗಿದ್ದರೋ, ಆ ಯಾವುದೇ ಅಂಗಡಿಗೆ ಅಥವಾ ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅರ್ಥವ್ಯಾಪ್ತಿಯೊಳಗೆ ಬರುವ ಪ್ರತಿಯೊಂದು ಅಂಗಡಿ ಅಥವಾ ಕಾರ್ಯಸಂಸ್ಥೆ;

(ಸಿ) ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ, ಯಾವ ಕಾರ್ಯಸಂಸ್ಥೆಗಳಲ್ಲಿ ಅಥವಾ ಯಾವ ಕಾರ್ಯಸಂಸ್ಥೆಗಳ ವರ್ಗದಲ್ಲಿ ಹಿಂದಿನ ಹನ್ನೆರಡು ತಿಂಗಳುಗಳಲ್ಲಿ ಯಾವುದೇ ದಿನದಂದು ಹತ್ತು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳು ನಿಯೋಜಿತರಾಗಿರುವರೋ ಅಥವಾ ನಿಯೋಜಿತರಾಗಿದ್ದರೋ, ಅಂಥ ಇತರ ಕಾರ್ಯಸಂಸ್ಥೆಗಳು ಅಥವಾ ಕಾರ್ಯಸಂಸ್ಥೆಗಳ ವರ್ಗ

- ಇವುಗಳಿಗೆ ಅನ್ವಯಿಸತಕ್ಕುದು.

(3ಎ) ಯಾವ ಅಂಗಡಿಗೆ ಅಥವಾ ಕಾರ್ಯಸಂಸ್ಥೆಗೆ ಈ ಅಧಿನಿಯಮವು ಅನ್ವಯವಾಗುವುದೋ ಆ ಅಂಗಡಿ ಅಥವಾ ಕಾರ್ಯಸಂಸ್ಥೆಗೆ, ಅದು ಹಾಗೆ ಅನ್ವಯವಾದ ತರುವಾಯವೂ, ಅದರಲ್ಲಿ ನಿಯೋಜಿತವಾಗಿರುವ ವ್ಯಕ್ತಿಗಳ ಸಂಖ್ಯೆಯು, ಯಾವುದೇ ಸಮಯದಲ್ಲಿ ಹತ್ತಕ್ಕಿಂತ ಕಡಿಮೆ ಇದ್ದಾಗ್ಯೂ, ಆ ಅಂಗಡಿಯು ಅಥವಾ ಕಾರ್ಯಸಂಸ್ಥೆಯು ಈ ಅಧಿನಿಯಮದ ಮೂಲಕ ನಿಯಂತ್ರಿತವಾಗುವುದು ಮುಂದುವರೆಯತಕ್ಕುದು.

(4) ಈ ಅಧಿನಿಯಮವು, ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರುತಕ್ಕುದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಸಮುಚಿತ ಸರ್ಕಾರ" ಎಂದರೆ, -

(i) (ಎ) ಕೇಂದ್ರ ಸರ್ಕಾರಕ್ಕೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ;

(ಬಿ) ಒಂದಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ಶಾಖೆಗಳನ್ನು ಹೊಂದಿರುವ;

(ಸಿ) ಕೇಂದ್ರ ಸರ್ಕಾರಕ್ಕೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ಕಾರ್ಖಾನೆಯ;

(ಡಿ) ದೊಡ್ಡ ಬಂದರು, ಗಣಿ, ತೈಲಕ್ಷೇತ್ರ ಅಥವಾ ರೈಲ್ವೆ ಕಂಪನಿಯ

- ಕಾರ್ಯಸಂಸ್ಥೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರ;

(ii) ಇತರ ಯಾವುದೇ ಸಂದರ್ಭದಲ್ಲಿ ರಾಜ್ಯ ಸರ್ಕಾರ;

(ಬಿ) "ಪೂರ್ಣಗೊಂಡ ಸೇವಾ ವರ್ಷ" ಎಂದರೆ, ಒಂದು ವರ್ಷದ ನಿರಂತರ ಸೇವೆ;

(ಸಿ) "ನಿರಂತರ ಸೇವೆ" ಎಂದರೆ, 2ಎ ಪ್ರಕರಣದಲ್ಲಿ ಪರಿಭಾಷಿಸಿದಂಥ ಸೇವೆ;

(ಡಿ) "ನಿಯಂತ್ರಣ ಪ್ರಾಧಿಕಾರ" ಎಂದರೆ, 3ನೇ ಪ್ರಕರಣದ ಮೇರೆಗೆ ಸಮುಚಿತ ಸರ್ಕಾರವು ನೇಮಿಸಿದ ಪ್ರಾಧಿಕಾರಿ;

(ಇ) "ನಿಯೋಜಿತ" ಎಂದರೆ, - ಯಾವುದೇ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ಪ್ಲಾಂಟೇಷನ್, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಯಲ್ಲಿ ಯಾವುದೇ ಕುಶಲ, ಅರೆಕುಶಲ ಅಥವಾ ಕುಶಲವಲ್ಲದ ಕೈ ದುಡಿಮೆ - ಮೇಲ್ವಿಚಾರಣೆ, ತಾಂತ್ರಿಕ ಅಥವಾ ಲಿಪಿಕ ಕಾರ್ಯ ಮಾಡಲು ನಿಯೋಜಿತನಾದ, ಅಂಥ ನಿಯೋಜನೆಯ ನಿಬಂಧನೆಗಳು ವ್ಯಕ್ತವಾಗಿರಲಿ ಅಥವಾ ಇಂಗಿತವಾಗಿರಲಿ ಮತ್ತು ಅಂಥ ವ್ಯಕ್ತಿಯು ವ್ಯವಸ್ಥಾಪನೆಯ ಅಥವಾ ಆಡಳಿತ ನಾತೆಯಲ್ಲಿ ನಿಯೋಜಿತನಾಗಿರಲಿ, ಆಗಿಲ್ಲದಿರಲಿ (ಉಮೇದುವಾರನಲ್ಲದ) ಇತರ ಯಾವನೇ ವ್ಯಕ್ತಿ, ಆದರೆ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಧೀನದಲ್ಲಿ ಒಂದು ಹುದ್ದೆಯನ್ನು ಧಾರಣ ಮಾಡಿದ್ದು ಯಾವುದೇ ಇತರ ಅಧಿನಿಯಮದ ಮೂಲಕ ಅಥವಾ ಉಪದಾನದ ಸಂದಾಯವನ್ನು ಉಪಬಂಧಿಸುವ ಯಾವುದೇ ನಿಯಮಗಳ ಮೂಲಕ ನಿಯಂತ್ರಿತನಾದ ಯಾವನೇ ವ್ಯಕ್ತಿಯನ್ನು ಒಳಗೊಳ್ಳುವುದಿಲ್ಲ.

---

* ದಿನಾಂಕ 16-9-1972 ರಿಂದ ಜಾರಿಗೆ ಬಂದಿದೆ. ಈ ಅಧಿನಿಯಮವು ಸಿಕ್ಕಿಂ ರಾಜ್ಯದಲ್ಲಿ 1-11-1995 ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಸಂಖ್ಯೆ: ಎಸ್.ಓ. 837 (ಇ), ದಿನಾಂಕ 12-10-1995 ನೋಡಿ.

(ಎಫ್) ಯಾವುದೇ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಗೆ ಸಂಬಂಧಿಸಿದಂತೆ "ನಿಯೋಜಕ" ಎಂದರೆ, -

(i) ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವವುಗಳಿಗೆ ಸಂಬಂಧಿಸಿದಂತೆ ನಿಯೋಜಿತರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ಸಮುಚಿತ ಸರ್ಕಾರವು ನೇಮಕ ಮಾಡಿದ ಒಬ್ಬ ವ್ಯಕ್ತಿ ಅಥವಾ ಪ್ರಾಧಿಕಾರಿ ಅಥವಾ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರಿಯನ್ನು ಹಾಗೆ ನೇಮಕ ಮಾಡದಿರುವಲ್ಲಿ, ಸಂಬಂಧಪಟ್ಟ ಸಚಿವಾಲಯದ ಅಥವಾ ಇಲಾಖೆಯ ಮುಖ್ಯಸ್ಥ;

(ii) ಯಾವುದೇ ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವವುಗಳಿಗೆ ಸಂಬಂಧಿಸಿದಂತೆ, ನಿಯೋಜಿತರ ಮೇಲ್ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ, ಅಂಥ ಪ್ರಾಧಿಕಾರಿಯು ನೇಮಕ ಮಾಡಿದ ವ್ಯಕ್ತಿ ಅಥವಾ ಯಾರೇ ವ್ಯಕ್ತಿಯನ್ನು ಹಾಗೆ ನೇಮಕ ಮಾಡಿರದಿದ್ದರೆ, ಸ್ಥಳೀಯ ಪ್ರಾಧಿಕಾರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ;

(iii) ಇತರ ಯಾವುದೇ ಸಂದರ್ಭದಲ್ಲಿ, ಆ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಯ ವ್ಯವಹಾರಗಳ ಮೇಲೆ ಅಂತಿಮ ನಿಯಂತ್ರಣ ಹೊಂದಿರುವ ವ್ಯಕ್ತಿ ಅಥವಾ ಪ್ರಾಧಿಕಾರಿ ಮತ್ತು ಸದರಿ ವ್ಯವಹಾರಗಳನ್ನು ವ್ಯವಸ್ಥಾಪಕ, ವ್ಯವಸ್ಥಾಪಕ ನಿರ್ದೇಶಕ ಅಥವಾ ಇತರ ಯಾವುದೇ ಹೆಸರಿನಿಂದ ಕರೆಯಲಾಗುವ ಯಾವನೇ ಇತರ ವ್ಯಕ್ತಿಗೆ ವಹಿಸಲಾಗಿದ್ದರೆ ಅಂಥ ವ್ಯಕ್ತಿ;

(ಜಿ) "ಕಾರ್ಖಾನೆ" ಎಂಬುದು, ಕಾರ್ಖಾನೆಗಳ ಅಧಿನಿಯಮ, 1948ರ (1948ರ 63) 2ನೇ ಪ್ರಕರಣದ (ಎಂ) ಖಂಡದಲ್ಲಿ ಅದಕ್ಕೆ ಕೊಟ್ಟ ಅರ್ಥವನ್ನು ಹೊಂದಿರುತ್ತದೆ;

(ಎಚ್) ನಿಯೋಜಿತನಿಗೆ ಸಂಬಂಧಪಟ್ಟಂತೆ "ಕುಟುಂಬ" ಎಂಬುದರಲ್ಲಿ, -

(i) ನಿಯೋಜಿತನ ಸಂದರ್ಭದಲ್ಲಿ, ಅವನು, ಅವನ ಹೆಂಡತಿ, ಮದುವೆ ಆಗಿರುವ ಅಥವಾ ಆಗಿಲ್ಲದಿರುವ ಅವನ ಮಕ್ಕಳು, ಅವನನ್ನು ಅವಲಂಬಿಸಿರುವ ಅವನ ತಂದೆ, ತಾಯಿ ಮತ್ತು ಅವನ ಹೆಂಡತಿಯನ್ನು ಅವಲಂಬಿಸಿರುವ ತಂದೆ - ತಾಯಿ ಮತ್ತು ಅವನ ಮೃತ ಮಗನ ವಿಧವೆ ಮತ್ತು ಮಕ್ಕಳು ಯಾರಾದರೂ ಇದ್ದರೆ ಅವರನ್ನು;

(ii) ನಿಯೋಜಿತಳ ಸಂದರ್ಭದಲ್ಲಿ, ಅವಳು, ಅವಳ ಗಂಡ, ಮದುವೆ ಆಗಿರುವ ಅಥವಾ ಆಗಿಲ್ಲದಿರುವ ಅವಳ ಮಕ್ಕಳು, ಅವಳನ್ನು ಅವಲಂಬಿಸಿರುವ ತಂದೆ ತಾಯಿ ಮತ್ತು ಅವಳ ಗಂಡನ ಅವಲಂಬಿತ ತಂದೆ ತಾಯಿಗಳು ಮತ್ತು ಅವಳ ಮೃತ ಮಗನ ವಿಧವೆ ಮತ್ತು ಮಕ್ಕಳು ಯಾರಾದರೂ ಇದ್ದರೆ

- ಅವರನ್ನು ಒಳಗೊಂಡಿರುವುದೆಂದು ಭಾವಿಸತಕ್ಕುದು.

ವಿವರಣೆ:- ನಿಯೋಜಿತನ ಮತ ಸಂಬಂಧಿ ಕಾನೂನು, ಮಗುವನ್ನು ದತ್ತು ತೆಗೆದುಕೊಳ್ಳಲು ಅನುಮತಿಸಿರುವಲ್ಲಿ, ಅವನು ಕಾನೂನು ಬದ್ಧವಾಗಿ ದತ್ತು ತೆಗೆದುಕೊಂಡ ಯಾವುದೇ ಮಗು ಅವನ ಕುಟುಂಬದಲ್ಲಿ ಸೇರಿದೆ ಎಂದು ಭಾವಿಸತಕ್ಕುದು, ಮತ್ತು ನಿಯೋಜಿತನ ಮಗನನ್ನು ಮತ್ತೊಬ್ಬ ವ್ಯಕ್ತಿಯು ದತ್ತು ತೆಗೆದುಕೊಂಡಿರುವಲ್ಲಿ ಮತ್ತು ಅಂಥ ದತ್ತಕವು, ಹಾಗೆ ದತ್ತು ತೆಗೆದುಕೊಳ್ಳುವ ವ್ಯಕ್ತಿಯ ಮತಸಂಬಂಧಿ ಕಾನೂನಿನ ಮೇರೆಗೆ ಕಾನೂನುಬದ್ಧವಾಗಿದ್ದರೆ, ಅಂಥ ಮಗುವನ್ನು ನಿಯೋಜಿತನ ಕುಟುಂಬದಿಂದ ಹೊರತುಪಡಿಸಲಾಗಿದೆ ಎಂದು ಭಾವಿಸತಕ್ಕುದು;

(ಐ) "ದೊಡ್ಡ ಬಂದರು" ಎಂಬುದು, ಭಾರತ ಬಂದರುಗಳ ಅಧಿನಿಯಮ, 1908ರ (1908ರ 15) 3ನೇ ಪ್ರಕರಣದ (8)ನೇ ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ;

(ಜೆ) "ಗಣಿ" ಎಂಬುದು, ಗಣಿಗಳ ಅಧಿನಿಯಮ, 1952ರ (1952ರ 35) 2ನೇ ಪ್ರಕರಣದ (1)ನೇ ಉಪಪ್ರಕರಣದ (ಜೆ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ:

(ಕೆ) "ಅಧಿಸೂಚನೆ" ಎಂದರೆ, ರಾಜಪತ್ರದಲ್ಲಿ ಪ್ರಕಟವಾದ ಅಧಿಸೂಚನೆ;

(ಎಲ್) "ತೈಲಕ್ಷೇತ್ರ" ಎಂಬುದು, ತೈಲಕ್ಷೇತ್ರಗಳ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1948ರ (1948ರ 53) 3ನೇ ಪ್ರಕರಣದ (ಇ) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ;

(ಎಂ) "ನೆಡುತೋಪು" ಎಂಬುದು, ಪ್ಲಾಂಟೇಷನ್ ಕಾರ್ಮಿಕರ ಅಧಿನಿಯಮ, 1951ರ (1951ರ 69) 2ನೇ ಪ್ರಕರಣದ (ಎಫ್) ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ;

(ಎನ್) "ಬಂದರು" ಎಂಬುದು, ಭಾರತ ಬಂದರುಗಳ ಅಧಿನಿಯಮ, 1908ರ (1908ರ 15) 3ನೇ ಪ್ರಕರಣದ (4)ನೇ ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ;

(ಒ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಪಿ) "ರೈಲ್ವೆ ಕಂಪನಿ" ಎಂಬುದು, ಭಾರತ ರೈಲ್ವೆಗಳ ಅಧಿನಿಯಮ, 1890ರ (1890ರ 9) 3ನೇ ಪ್ರಕರಣದ (5)ನೇ ಖಂಡದಲ್ಲಿ ಅದಕ್ಕೆ ಕೊಟ್ಟಿರುವ ಅರ್ಥವನ್ನು ಹೊಂದಿರುತ್ತದೆ;

(ಕ್ಯೂ) "ನಿವೃತ್ತಿ" ಎಂದರೆ, ಸೇವಾ ನಿವೃತ್ತಿಯಲ್ಲದೆ ಅನ್ಯಥಾ ನಿಯೋಜಿತನ ಸೇವೆಯನ್ನು ಕೊನೆಗೊಳಿಸುವುದು;

(ಆರ್) ನಿಯೋಜಿತನ ಸಂಬಂಧದಲ್ಲಿ "ಸೇವಾ ನಿವೃತ್ತಿ" ಎಂದರೆ, ಯಾವ ವಯಸ್ಸನ್ನು ತಲುಪಿದ ಮೇಲೆ ನಿಯೋಜಿತನು ನಿಯೋಜನೆಯನ್ನು ತೆರವು ಮಾಡತಕ್ಕುದೆಂದು ಸೇವಾ ಕರಾರು ಅಥವಾ ಷರತ್ತುಗಳಲ್ಲಿ ನಿಗದಿಪಡಿಸಲಾಗಿದೆಯೋ ಅಂಥ ವಯಸ್ಸನ್ನು ನಿಯೋಜಿತನು ತಲುಪುವುದು;

(ಎಸ್) "ಮಜೂರಿಗಳು" ಎಂದರೆ, ನಿಯೋಜಿತನ ನಿಯೋಜನೆಯ ನಿಬಂಧನೆಗಳು ಮತ್ತು ಷರತ್ತುಗಳಿಗೆ ಅನುಸಾರವಾಗಿ, ಅವನು ಕರ್ತವ್ಯದ ಮೇಲಿರುವಾಗ ಅಥವಾ ರಜೆಯ ಮೇಲಿರುವಾಗ ಗಳಿಸುವ ಮತ್ತು ಅವನಿಗೆ ನಗದು ರೂಪದಲ್ಲಿ ಸಂದಾಯವಾದ ಅಥವಾ ಸಂದಾಯವಾಗಬೇಕಾಗುವ ಎಲ್ಲ ಉಪಲಬ್ಧಿಗಳು ಮತ್ತು ಇದರಲ್ಲಿ ತುಟ್ಟಿಭತ್ಯೆಯೂ ಒಳಗೊಳ್ಳುತ್ತದೆ. ಆದರೆ, ಯಾವುದೇ ಬೋನಸ್, ದಳ್ಳಾಳಿ, ಮನೆ ಬಾಡಿಗೆ ಭತ್ಯೆ, ಅಧಿಕ ಕಾಲಿಕ ಮಜೂರಿಗಳು ಮತ್ತು ಇತರ ಯಾವುದೇ ಭತ್ಯೆ ಒಳಗೊಳ್ಳುವುದಿಲ್ಲ.

2 ಎ. ನಿರಂತರ ಸೇವೆ:- ಈ ಅಧಿನಿಯಮದ ಉದ್ದೇಶಗಳಿಗಾಗಿ, -

(1) ನಿಯೋಜಿತನು, ಖಾಯಿಲೆಯಿಂದಾಗಿ, ಅಪಘಾತದಿಂದಾಗಿ, ರಜೆಯಿಂದಾಗಿ, ರಜೆಯಿಲ್ಲದೆ ಕರ್ತವ್ಯದಿಂದ ಗೈರು ಹಾಜರಾಗಿರುವುದರಿಂದಾಗಿ (ಆ ಕಾರ್ಯಸಂಸ್ಥೆಯನ್ನು ನಿಯಂತ್ರಿಸುತ್ತಿರುವ ಸ್ಥಾಯೀ ಆದೇಶಗಳಿಗೆ, ನಿಯಮಗಳಿಗೆ ಅಥವಾ ವಿನಿಯಮಗಳಿಗೆ ಅನುಸಾರವಾಗಿ ಯಾವ ಗೈರು ಹಾಜರಿಯ

ಬಗ್ಗೆ, ಆ ಗೈರು ಹಾಜರಿಯನ್ನು ಸೇವೆಯಲ್ಲಿ ಭಂಗ ಎಂದು ಪರಿಗಣಿಸಿ ಆದೇಶವನ್ನು ಹೊರಡಿಸಲಾಗಿರುವುದೋ ಅಂಥ ಗೈರು ಹಾಜರಿಯಾಗಿರದೆ), ಹಂಗಾಮಿಯಾಗಿ ಕೆಲಸದಿಂದ ವಜಾ ಮಾಡಿದುದರಿಂದಾಗಿ, ಮುಷ್ಕರದಿಂದಾಗಿ ಅಥವಾ ಬೀಗಮುದ್ರೆ ಹಾಕಿರುವುದರಿಂದಾಗಿ, ನಿಯೋಜಕನ ಯಾವುದೇ ತಪ್ಪಿನಿಂದಲ್ಲದೆ ಕೆಲಸ ನಿಲ್ಲುವುದರಿಂದಾಗಿ, ಅಡಚಣೆಗೊಂಡ ಸೇವೆಯನ್ನು ಒಳಗೊಂಡು, ನಿಯೋಜಿತನು ಅಡಚಣೆರಹಿತ ಸೇವೆಯನ್ನು ಸಲ್ಲಿಸಿರುವ ಅವಧಿಯವರೆಗೆ ನಿರಂತರ ಸೇವೆಯಲ್ಲಿರುವನೆಂದು, ಆ ಅಡಚಣೆರಹಿತ ಅಥವಾ ಅಡಚಣೆಗೊಂಡ ಸೇವೆಯನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚಿತವಾಗಿ ಸಲ್ಲಿಸಿರಲಿ ಅಥವಾ ತರುವಾಯ ಸಲ್ಲಿಸದಿರಲಿ ಹೇಳತಕ್ಕುದು.

(2) (ಹಂಗಾಮು ಕಾರ್ಯಸಂಸ್ಥೆಯಲ್ಲಿ ಕಾರ್ಯನಿಯೋಜಿತನಾದಂಥ ನಿಯೋಜಿತನು ಆಗಿರದ) ನಿಯೋಜಿತನು (1)ನೇ ಖಂಡದ ಅರ್ಥವ್ಯಾಪ್ತಿಯೊಳಗೆ ಒಂದು ವರ್ಷ ಅಥವಾ ಆರು ತಿಂಗಳುಗಳ ಯಾವುದೇ ಅವಧಿಯವರೆಗೆ ನಿರಂತರ ಸೇವೆಯಲ್ಲಿಲ್ಲದಿರುವಲ್ಲಿ, ಆ ನಿಯೋಜಿತನು, -

(ಎ) ಲೆಕ್ಕ ಹಾಕತಕ್ಕ ದಿನಾಂಕಕ್ಕೆ ಮುಂಚಿತ ಹನ್ನೆರಡು ಕ್ಯಾಲೆಂಡರು ತಿಂಗಳುಗಳ ಅವಧಿಯಲ್ಲಿ ನಿಯೋಜಕನ ಅಧೀನದಲ್ಲಿ, -

(i) ನಿಯೋಜಕನು ಭೂಮಿಯ ಕೆಳಗೆ ಒಂದು ವಾರದಲ್ಲಿ ಆರು ದಿವಸಗಳಿಗಿಂತ ಕಡಿಮೆ ಕೆಲಸ ಮಾಡುತ್ತಿರುವ ಗಣಿಯಲ್ಲಾಗಲಿ, ಕಾರ್ಯ ಸಂಸ್ಥೆಯಲ್ಲಾಗಲಿ ಕಾರ್ಯನಿಯೋಜಿತನಾಗಿರುವ ಸಂದರ್ಭದಲ್ಲಿ ನೂರಾ ತೊಂಬತ್ತು ದಿನಗಳವರೆಗೆ ಕೆಲಸ ಮಾಡಿದ್ದರೆ; ಮತ್ತು

(ii) ಇತರ ಯಾವುದೇ ಸಂದರ್ಭದಲ್ಲಿ ಇನ್ನೂರ ನಲವತ್ತು ದಿನಗಳಿಗೆ ಕಡಿಮೆಯಿಲ್ಲದಂತೆ ವಾಸ್ತವಿಕವಾಗಿ ಕೆಲಸ ಮಾಡಿದ್ದರೆ, ಅವನು ಮೇಲ್ಕಂಡ ಒಂದು ವರ್ಷದ ಅವಧಿಯಲ್ಲಿ ನಿರಂತರ ಸೇವೆಯಲ್ಲಿರುವನೆಂದು;

(ಬಿ) ನಿಯೋಜಿತನು, ಲೆಕ್ಕಹಾಕತಕ್ಕ ದಿನಾಂಕಕ್ಕೆ ಮುಂಚಿನ ಆರು ಕ್ಯಾಲೆಂಡರು ತಿಂಗಳುಗಳ ಅವಧಿಯಲ್ಲಿ ನಿಯೋಜಕ ಅಧೀನದಲ್ಲಿ, -

(i) ನಿಯೋಜಿತನು ಭೂಮಿಯ ಕೆಳಗೆ ಒಂದು ವಾರದಲ್ಲಿ ಆರು ದಿನಗಳಿಗಿಂತ ಕಡಿಮೆ ಕೆಲಸ ಮಾಡುತ್ತಿರುವ ಗಣಿಯಲ್ಲಾಗಲಿ, ಕಾರ್ಯಸಂಸ್ಥೆಯಲ್ಲಾಗಲಿ ಕಾರ್ಯನಿಯೋಜಿತನಾಗಿರುವ ಸಂದರ್ಭದಲ್ಲಿ, ತೊಂಬತ್ತೈದು ದಿನಗಳವರೆಗೆ ಕೆಲಸಮಾಡಿದ್ದರೆ; ಮತ್ತು

(ii) ಇತರ ಯಾವುದೇ ಸಂದರ್ಭದಲ್ಲಿ, ನೂರಾ ಇಪ್ಪತ್ತು ದಿನಗಳಿಗೆ ಕಡಿಮೆಯಿಲ್ಲದಂತೆ ವಾಸ್ತವಿಕವಾಗಿ ಕೆಲಸ ಮಾಡಿದ್ದರೆ, ಅವನು ಮೇಲ್ಕಂಡ ಆರು ತಿಂಗಳುಗಳ ಅವಧಿಯಲ್ಲಿ ನಿರಂತರ ಸೇವೆಯಲ್ಲಿರುವನೆಂದು

- ಭಾವಿಸತಕ್ಕುದು.

ವಿವರಣೆ:- (2)ನೇ ಖಂಡದ ಉದ್ದೇಶಗಳಿಗಾಗಿ, ನಿಯೋಜಕನ ಬಳಿ ನಿಯೋಜಿತನು ವಾಸ್ತವವಾಗಿ ಕೆಲಸ ಮಾಡಿದ ದಿನಗಳ ಸಂಖ್ಯೆಯು ಈ ಕೆಳಕಂಡ ದಿನಗಳನ್ನು ಒಳಗೊಳ್ಳತಕ್ಕುದು, -

(i) ಒಂದು ಒಪ್ಪಂದದ ಮೇರೆಗೆ ಅಥವಾ ಔದ್ಯಮಿಕ ನಿಯೋಜನೆ (ಸ್ಥಾಯಿ ಆದೇಶಗಳು) ಅಧಿನಿಯಮ, 1946 (1946ರ 20)ರ ಮೇರೆಗೆ ಅಥವಾ ಕೈಗಾರಿಕಾ ವಿವಾದಗಳ ಅಧಿನಿಯಮ, 1947 (1947ರ 14) ಅಥವಾ ಆ ಕಾರ್ಯಸಂಸ್ಥೆಗೆ ಅನ್ವಯವಾಗುವ ಯಾವುದೇ ಇತರ ಕಾನೂನಿನ ಮೇರೆಗೆ ಮಾಡಿದ ಸ್ಥಾಯಿ ಆದೇಶಗಳ ಮೂಲಕ ಅನುಮತಿಸಲಾದಂತೆ ಅವನನ್ನು ಹಂಗಾಮಿಯಾಗಿ ಕೆಲಸದಿಂದ ವಜಾ ಮಾಡಿದ ದಿನಗಳು;

(ii) ಅವನು ಹಿಂದಿನ ವರ್ಷದಲ್ಲಿ ಗಳಿಸಿದ ರಜೆಯನ್ನು ಬಳಸಿಕೊಂಡು ಪೂರ್ಣ ವೇತನದ ಸಮೇತ ರಜೆಯಲ್ಲಿದ್ದ ದಿನಗಳು;

(iii) ಅವನ ನಿಯೋಜನೆಯಿಂದಾಗಿ ಮತ್ತು ಆ ನಿಯೋಜನೆಯ ಕಾಲದಲ್ಲಿ ಸಂಭವಿಸಿದ ಅಪಘಾತದಿಂದ ಉಂಟಾದ ತಾತ್ಕಾಲಿಕ ಅಸಮರ್ಥತೆಯ ಕಾರಣದಿಂದ ಅವನು ಗೈರುಹಾಜರಾಗಿದ್ದ ದಿನಗಳು;

(iv) ಮಹಿಳೆಯ ಸಂದರ್ಭದಲ್ಲಿ, ಅವಳು ಪ್ರಸೂತಿ ರಜೆಯಲ್ಲಿದ್ದ ದಿನಗಳು, ಆದಾಗ್ಯೂ, ಅಂತಹ ಪ್ರಸೂತಿ ರಜೆಯ ಒಟ್ಟು ಅವಧಿಯು ಹನ್ನೆರಡು ವಾರಗಳಿಗೆ ಮೀರಕೂಡದು.

(3) ಹಂಗಾಮು ಕಾರ್ಯಸಂಸ್ಥೆಯಲ್ಲಿ ಕಾರ್ಯನಿಯೋಜಿತನಾಗಿರುವ ನಿಯೋಜಿತನು (1)ನೇ ಖಂಡದ ಅರ್ಥವ್ಯಾಪ್ತಿಯೊಳಗೆ ಒಂದು ವರ್ಷದ ಅಥವಾ ಆರು ತಿಂಗಳುಗಳ ಯಾವುದೇ ಕಾಲಾವಧಿಯಲ್ಲಿ ನಿರಂತರ ಸೇವೆಯಲ್ಲಿರದಿದ್ದಲ್ಲಿ, ಆ ನಿಯೋಜಿತನು ಅಂಥ ಕಾಲಾವಧಿಯಲ್ಲಿ ಆ ಕಾರ್ಯಸಂಸ್ಥೆಯು ಕಾರ್ಯಾಚರಣೆ ಮಾಡಿದ ಒಟ್ಟು ದಿನಗಳಲ್ಲಿ ಶೇಕಡಾ ಎಪ್ಪತ್ತೈದು ದಿನಗಳಿಗೆ ಕಡಿಮೆಯಿಲ್ಲದಂತೆ ವಾಸ್ತವವಾಗಿ ಕೆಲಸ ಮಾಡಿದ್ದರೆ ಅವನು ಅಂಥ ಅವಧಿಯಲ್ಲಿ ನಿಯೋಜಕನ ಅಧೀನದಲ್ಲಿ ನಿರಂತರ ಸೇವೆಯಲ್ಲಿರುವನೆಂದು ಭಾವಿಸತಕ್ಕುದು.

3. ನಿಯಂತ್ರಣ ಪ್ರಾಧಿಕಾರಿ:- ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಯಾವನೇ ಅಧಿಕಾರಿಯನ್ನು ನಿಯಂತ್ರಣ ಪ್ರಾಧಿಕಾರಿಯಾಗಿ ನೇಮಿಸಬಹುದು; ಅವನು ಈ ಅಧಿನಿಯಮದ ಆಡಳಿತ ನಿರ್ವಹಣೆಗೆ ಜವಾಬ್ದಾರನಾಗಿರತಕ್ಕುದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಬೇರೆ ಬೇರೆ ನಿಯಂತ್ರಣ ಪ್ರಾಧಿಕಾರಿಗಳನ್ನು ನೇಮಿಸಬಹುದು.

4. ಉಪದಾನದ ಸಂದಾಯ:- (1) ನಿಯೋಜಿತನು ಐದು ವರ್ಷಗಳಿಗೆ ಕಡಿಮೆಯಿಲ್ಲದ ನಿರಂತರ ಸೇವೆಯನ್ನು ಸಲ್ಲಿಸಿದ ತರುವಾಯ, ಅವನ ನಿಯೋಜನೆಯು ಕೊನೆಗೊಂಡ ಮೇಲೆ, -

(ಎ) ಅವನ ಸೇವಾ ನಿವೃತ್ತಿ ಆದ ಮೇಲೆ; ಅಥವಾ

(ಬಿ) ಅವನು ನಿವೃತ್ತನಾದ ಮೇಲೆ ಅಥವಾ ರಾಜೀನಾಮೆ ಕೊಟ್ಟ ಮೇಲೆ; ಅಥವಾ

(ಸಿ) ಅಪಘಾತ ಅಥವಾ ಕಾಯಿಲೆಯಿಂದಾಗಿ ಅವನು ಮೃತನಾದ ಮೇಲೆ ಅಥವಾ ಅಸಮರ್ಥನಾದ ಮೇಲೆ

- ಉಪದಾನವನ್ನು ಸಂದಾಯ ಮಾಡತಕ್ಕುದು:

ಪರಂತು, ಮರಣ ಅಥವಾ ಅಸಮರ್ಥತೆಯ ಕಾರಣದಿಂದಾಗಿ ಯಾರೇ ನಿಯೋಜಿತನ ನಿಯೋಜನೆಯನ್ನು ಕೊನೆಗೊಳಿಸಿರುವಲ್ಲಿ, ಅವನು ಐದು ವರ್ಷಗಳ ಕಾಲ ನಿರಂತರ ಸೇವೆಯನ್ನು ಪೂರ್ಣಗೊಳಿಸಿರಬೇಕೆಂಬುದು ಅವಶ್ಯಕವಾಗಿರತಕ್ಕುದಲ್ಲ:

ಮತ್ತೂ ಪರಂತು, ಆ ನಿಯೋಜಿತನು ಮರಣ ಹೊಂದಿದ ಸಂದರ್ಭದಲ್ಲಿ, ಅವನಿಗೆ ಸಂದಾಯವಾಗಬೇಕಾದ ಉಪದಾನವನ್ನು ಅವನ ನಾಮನಿರ್ದೇಶಿತ ವ್ಯಕ್ತಿಗೆ ಅಥವಾ ಯಾವುದೇ ನಾಮನಿರ್ದೇಶನವನ್ನು ಮಾಡಿರದಿದ್ದರೆ, ಅವನ ವಾರಸುದಾರರಿಗೆ ಸಂದಾಯ ಮಾಡತಕ್ಕುದು ಮತ್ತು ಯಾರೇ ಅಂತಹ ನಾಮನಿರ್ದೇಶಿತನು ಅಥವಾ ವಾರಸುದಾರನು ಅಪ್ರಾಪ್ತ ವಯಸ್ಕನಾಗಿರುವಲ್ಲಿ ಅಂತಹ ಅಪ್ರಾಪ್ತ ವಯಸ್ಕನ ಪಾಲನ್ನು ನಿಯಂತ್ರಣ ಪ್ರಾಧಿಕಾರಿಯ ಬಳಿ ಠೇವಣಿ ಇಡತಕ್ಕುದು. ಆ ಪ್ರಾಧಿಕಾರಿಯು ಅದನ್ನು ಅಂತಹ ಅಪ್ರಾಪ್ತ ವಯಸ್ಕನ ಪ್ರಯೋಜನಕ್ಕಾಗಿ ಅಂತಹ ಅಪ್ರಾಪ್ತವಯಸ್ಕನು ಪ್ರಾಪ್ತ ವಯಸ್ಕನಾಗುವವರೆಗೆ ನಿಯಮಿಸಬಹುದಾದಂತಹ ಬ್ಯಾಂಕ್ ಅಥವಾ ಇತರ ಹಣಕಾಸು ಸಂಸ್ಥೆಯಲ್ಲಿ ತೊಡಗಿಸತಕ್ಕುದು.

ವಿವರಣೆ:- ಈ ಪ್ರಕರಣದ ಉದ್ದೇಶಗಳಿಗಾಗಿ, ಅಸಮರ್ಥತೆ ಎಂದರೆ, ಅಂಥ ಅಸಮರ್ಥತೆಯನ್ನುಂಟುಮಾಡುವ ಅಪಘಾತ ಅಥವಾ ಕಾಯಿಲೆಗೆ ಮೊದಲು, ನಿಯೋಜಿತನು ನೆರವೇರಿಸಲು ಸಮರ್ಥನಾಗಿದ್ದಂಥ ಕೆಲಸವನ್ನು ನೆರವೇರಿಸಲು ಅವನನ್ನು ಅಸಮರ್ಥಗೊಳಿಸುವಂಥ ಅಸಮರ್ಥತೆ.

(2) ಸೇವೆಯ ಪೂರ್ಣಗೊಂಡ ಪ್ರತಿವರ್ಷ ಅಥವಾ ಆರು ತಿಂಗಳುಗಳಿಗೆ ಮೀರಿದ ಅದರ ಭಾಗಕ್ಕೆ, ನಿಯೋಜಕನು, ಸಂಬಂಧಪಟ್ಟ ನಿಯೋಜಿತನು ಕೊನೆಯಲ್ಲಿ ಪಡೆದ ಮಜೂರಿಗಳ ದರದ ಆಧಾರದ ಮೇಲೆ, ಹದಿನೈದು ದಿನಗಳ ಮಜೂರಿಗಳ ದರದಲ್ಲಿ ನಿಯೋಜಿತನಿಗೆ ಉಪದಾನವನ್ನು ಸಂದಾಯ ಮಾಡತಕ್ಕದ್ದು:

ಪರಂತು, ತುಂಡು ದರದ ಆಧಾರದಲ್ಲಿ ಕೆಲಸ ಮಾಡುವ ನಿಯೋಜಿತನ ಸಂದರ್ಭದಲ್ಲಿ, ಅವನ ನಿಯೋಜನೆಯನ್ನು ಕೊನೆಗೊಳಿಸಿದ ನಿಕಟಪೂರ್ವದ ಮೂರು ತಿಂಗಳುಗಳ ಅವಧಿಯಲ್ಲಿ ಅವನು ಸ್ವೀಕರಿಸಿದ ಒಟ್ಟು ಮಜೂರಿಗಳ ಸರಾಸರಿಯ ಆಧಾರದ ಮೇಲೆ ದಿನಗೂಲಿಯನ್ನು ಲೆಕ್ಕ ಹಾಕತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ, ಯಾವುದೇ ಅಧಿಕಕಾಲಿಕ ಕೆಲಸಕ್ಕೆ ಸಂದಾಯ ಮಾಡಿದ ಮಜೂರಿಗಳನ್ನು ಗಣನೆಗೆ ತೆಗೆದುಕೊಳ್ಳತಕ್ಕದ್ದಲ್ಲ:

ಮತ್ತೂ ಪರಂತು, ಹಂಗಾಮು ಕಾರ್ಯಸಂಸ್ಥೆಯಲ್ಲಿ ನಿಯೋಜಿತನಾಗಿರುವ ಮತ್ತು ವರ್ಷಾದ್ಯಂತ ಹಾಗೆ ನಿಯೋಜಿತನಾಗಿರದ ನಿಯೋಜಿತನ ಸಂದರ್ಭದಲ್ಲಿ, ನಿಯೋಜಕನು, ಪ್ರತಿಯೊಂದು ಹಂಗಾಮು ಅವಧಿಗೆ ಏಳು ದಿನಗಳ ಮಜೂರಿಗಳ ದರದಲ್ಲಿ, ಉಪದಾನವನ್ನು ಸಂದಾಯ ಮಾಡತಕ್ಕದ್ದು.

ವಿವರಣೆ:- ಮಾಸಿಕ ದರದ ನಿಯೋಜಿತನ ಸಂದರ್ಭದಲ್ಲಿ ಹದಿನೈದು ದಿನಗಳ ಮಜೂರಿಯನ್ನು, ಅವನು ಕೊನೆಯದಾಗಿ ಪಡೆದ ಮಾಸಿಕ ದರದ ಮಜೂರಿಯನ್ನು ಇಪ್ಪತ್ತಾರರಿಂದ ಭಾಗಿಸಿ ಆ ಭಾಗಲಬ್ಧವನ್ನು ಹದಿನೈದರಿಂದ ಗುಣಿಸಿ ಲೆಕ್ಕ ಹಾಕತಕ್ಕದ್ದು.

(3) ನಿಯೋಜಿತನಿಗೆ ಸಂದಾಯವಾಗಬೇಕಾದ ಉಪದಾನದ ಮೊಬಲಗು, ಮೂರು ಲಕ್ಷ ಐವತ್ತು ಸಾವಿರ ರೂಪಾಯಿಗಳನ್ನು ಮೀರತಕ್ಕದ್ದಲ್ಲ.

(4) ನಿಯೋಜಿತನು ಅಸಮರ್ಥನಾದ ತರುವಾಯ ಕಡಿಮೆ ಮಜೂರಿಗಳ ಮೇಲೆ ನಿಯೋಜಿತನಾದವನಿಗೆ ಸಂದಾಯವಾಗಬೇಕಾದ ಉಪದಾನವನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ, ಅವನು ಅಸಮರ್ಥನಾಗುವುದಕ್ಕೆ ಹಿಂದಿನ ಅವಧಿಯಲ್ಲಿ, ಅವನು ಆ ಅವಧಿಯಲ್ಲಿ ಸ್ವೀಕರಿಸಿದ ಮಜೂರಿಗಳನ್ನು ಅವನ ಮಜೂರಿಗಳೆಂದು ಪರಿಗಣಿಸತಕ್ಕದ್ದು ಮತ್ತು ಅವನು ಅಸಮರ್ಥನಾದ ತರುವಾಯದ ಅವಧಿಯಲ್ಲಿ ಅವನ ಮಜೂರಿಗಳನ್ನು ಹಾಗೆ ಕಡಿಮೆ ಮಾಡಲಾದಂಥ ಮಜೂರಿಗಳಾಗಿ ಪರಿಗಣಿಸತಕ್ಕದ್ದು.

(5) ಈ ಪ್ರಕರಣದಲ್ಲಿರುವುದು ಯಾವುದೂ, ನಿಯೋಜಿತನು ಯಾವುದೇ ಐತೀರ್ಪು, ಅಥವಾ ನಿಯೋಜಕನೊಂದಿಗೆ ಮಾಡಿಕೊಂಡ ಉತ್ತಮ ನಿಬಂಧನೆಗಳ ಒಪ್ಪಂದ ಅಥವಾ ಕರಾರಿನ ಮೇರೆಗೆ ಉಪದಾನವನ್ನು ಸ್ವೀಕರಿಸುವ ಹಕ್ಕಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(6) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, -

(ಎ) ನಿಯೋಜಕನಿಗೆ ಸೇರಿದ ಸ್ವತ್ತಿಗೆ ಯಾವುದೇ ಹಾನಿ ಅಥವಾ ನಷ್ಟ ಅಥವಾ ನಾಶವನ್ನುಂಟು ಮಾಡುವ ಯಾವುದೇ ಕಾರ್ಯ, ಉದ್ದೇಶಪೂರ್ವಕ ಲೋಪ ಅಥವಾ ನಿರ್ಲಕ್ಷ್ಯತೆಗಾಗಿ, ಯಾವ ನಿಯೋಜಿತನ ಸೇವೆಗಳನ್ನು ಕೊನೆಗೊಳಿಸಲಾಗಿದೆಯೋ ಆ ನಿಯೋಜಿತನ ಉಪದಾನವನ್ನು ಅವನು ಹಾಗೆ ಉಂಟು ಮಾಡಿದ ಹಾನಿ ಅಥವಾ ನಷ್ಟದಷ್ಟರಮಟ್ಟಿಗೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು.

(ಬಿ) ನಿಯೋಜಿತನಿಗೆ ಸಂದಾಯವಾಗಬೇಕಾದ ಉಪದಾನವನ್ನು, -

(i) ಅಂಥ ನಿಯೋಜಿತನ ಸೇವೆಗಳನ್ನು, ಅಥವಾ ಅವ್ಯವಸ್ಥಿತ ನಡತೆ ಅಥವಾ ಅವನಿಂದಾದ ಯಾವುದೇ ಇತರ ಹಿಂಸಾತ್ಮಕ ಕಾರ್ಯಕ್ಕಾಗಿ ಕೊನೆಗೊಳಿಸಿದರೆ; ಅಥವಾ

(ii) ಅಂಥ ನಿಯೋಜಿತನ ಸೇವೆಗಳನ್ನು ನೈತಿಕ ಪತನವನ್ನೊಳಗೊಂಡ ಅಪರಾಧವನ್ನಾಗಿಸುವಂಥ ಯಾವುದೇ ಕಾರ್ಯಕ್ಕಾಗಿ ಕೊನೆಗೊಳಿಸಿದ್ದರೆ

- ಸಂಪೂರ್ಣವಾಗಿ ಅಥವಾ ಭಾಗಶಃ ಮುಟ್ಟುಗೋಲು ಹಾಕಿಕೊಳ್ಳಬಹುದು:

ಪರಂತು, ಅಂಥ ಅಪರಾಧವನ್ನು ಅವನು ನಿಯೋಜನೆಯ ಕಾಲದಲ್ಲಿ ಮಾಡಿರಬೇಕು.

(7) [xxx]

4ಎ. ಕಡ್ಡಾಯ ವಿಮೆ:- (1) ಈ ಬಗ್ಗೆ ಸಮುಚಿತ ಸರ್ಕಾರವು ಅಧಿಸೂಚಿಸಬಹುದಾದಂತಹ ದಿನಾಂಕದಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರಕ್ಕೆ ಅಥವಾ ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ ಅದರ ನಿಯಂತ್ರಣದಲ್ಲಿರುವ ನಿಯೋಜಕ ಅಥವಾ ಕಾರ್ಯಸಂಸ್ಥೆಯಲ್ಲದ ಪ್ರತಿಯೊಬ್ಬ ನಿಯೋಜಕನು, (2)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು, ಈ ಅಧಿನಿಯಮದ ಮೇರೆಗೆ ಉಪದಾನದ ಬಗ್ಗೆ ಸಂದಾಯ ಮಾಡುವ ತನ್ನ ಹೊಣೆಗಾರಿಕೆಗಾಗಿ, ಭಾರತೀಯ ಜೀವ ವಿಮಾ ನಿಗಮ ಅಧಿನಿಯಮ, 1956 (1956ರ 31) ರ ಮೇರೆಗೆ ಸ್ಥಾಪಿತವಾದ ಭಾರತೀಯ ಜೀವ ವಿಮಾ ನಿಗಮದಿಂದ ಅಥವಾ ನಿಯಮಿಸಲಾದ ಯಾರೇ ಇತರ ವಿಮಾಕರ್ತನಿಂದ ನಿಯಮಿಸಲಾದ ರೀತಿಯಲ್ಲಿ ವಿಮೆಯನ್ನು ಪಡೆದುಕೊಳ್ಳತಕ್ಕದ್ದು:

ಪರಂತು, ಬೇರೆ ಬೇರೆ ಕಾರ್ಯಸಂಸ್ಥೆಗಳಿಗಾಗಿ ಅಥವಾ ಕಾರ್ಯಸಂಸ್ಥೆಗಳ ವರ್ಗಕ್ಕಾಗಿ ಅಥವಾ ಬೇರೆ ಬೇರೆ ಪ್ರದೇಶಗಳಿಗಾಗಿ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

(2) ಸಮುಚಿತ ಸರ್ಕಾರವು ನಿಯಮಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ನಿಯೋಜಕನು ತನ್ನ ನಿಯೋಜಿತರ ಸಂಬಂಧದಲ್ಲಿ ಅನುಮೋದಿತ ಉಪದಾನ ನಿಧಿಯನ್ನು ಈಗಾಗಲೇ ಸ್ಥಾಪಿಸಿರುವ ಮತ್ತು ಅಂತಹ ವ್ಯವಸ್ಥೆಯನ್ನು ಮುಂದುವರಿಸಬಯಸುವ ಪ್ರತಿಯೊಬ್ಬ ನಿಯೋಜಕನಿಗೆ ಮತ್ತು 500 ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳನ್ನು ನಿಯೋಜಿಸಿಕೊಳ್ಳುವ ಮತ್ತು ನಿಯಮಿಸಲಾದ ರೀತಿಯಲ್ಲಿ ಅನುಮೋದಿತ ಉಪದಾನ ನಿಧಿಯನ್ನು ಸ್ಥಾಪಿಸುವ ಪ್ರತಿಯೊಬ್ಬ ನಿಯೋಜಕನಿಗೆ (1)ನೆಯ ಉಪಪ್ರಕರಣದ ಉಪಬಂಧಗಳಿಂದ ವಿನಾಯಿತಿ ನೀಡಬಹುದು.

(3) ಈ ಪ್ರಕರಣದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶಕ್ಕಾಗಿ, ಪ್ರತಿಯೊಬ್ಬ ನಿಯೋಜಕನು, ನಿಯಮಿಸಬಹುದಾದಂತಹ ಸಮಯದೊಳಗೆ ನಿಯಂತ್ರಣ ಪ್ರಾಧಿಕಾರಿಯ ಬಳಿ ನಿಯಮಿಸಿದ ರೀತಿಯಲ್ಲಿ ತನ್ನ ಕಾರ್ಯಸಂಸ್ಥೆಯನ್ನು ನೋಂದಾಯಿಸಿಕೊಳ್ಳತಕ್ಕದ್ದು ಮತ್ತು ಒಬ್ಬ ನಿಯೋಜಕನು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿರುವ ವಿಮೆಯನ್ನು ತೆಗೆದುಕೊಂಡ ಹೊರತು, ಅಥವಾ (2)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿರುವ ಅನುಮೋದಿತ ಉಪದಾನ ನಿಧಿಯನ್ನು ಸ್ಥಾಪಿಸಿದ ಹೊರತು ಯಾವನೇ ನಿಯೋಜಕನನ್ನು ಈ ಪ್ರಕರಣದ ಉಪಬಂಧಗಳ ಮೇರೆಗೆ ನೋಂದಾಯಿಸತಕ್ಕದ್ದಲ್ಲ.

(4) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಈ ಪ್ರಕರಣದ ಉಪಬಂಧಗಳನ್ನು ಜಾರಿಗೊಳಿಸಲು ನಿಯಮಗಳನ್ನು ರಚಿಸಬಹುದು ಮತ್ತು ಅಂತಹ ನಿಯಮಗಳು, ಅನುಮೋದಿತ ಉಪದಾನ ನಿಧಿಯ ನ್ಯಾಸ ಮಂಡಲಿಯ ರಚನೆ ಬಗ್ಗೆ ಮತ್ತು ಭಾರತೀಯ ಜೀವ ವಿಮಾ ನಿಗಮ ಅಥವಾ (1)ನೇ ಉಪಪ್ರಕರಣದ ಮೇರೆಗೆ ಯಾವ ವಿಮಾಕರ್ತನಿಂದ ವಿಮೆಯನ್ನು ತೆಗೆದುಕೊಳ್ಳಲಾಗಿದೆಯೋ ಆ ಯಾವನೇ ಇತರ ವಿಮಾಕರ್ತನಿಂದ ಅಥವಾ

ಸಂದರ್ಭಾನುಸಾರ ಅನುಮೋದಿತ ಉಪದಾನದ ನಿಧಿಯ ನ್ಯಾಸ ಮಂಡಲಿಯಿಂದ ಒಬ್ಬ ನಿಯೋಜಿತನಿಗೆ ಸಂದಾಯವಾಗಬೇಕಾದ ಉಪದಾನದ ಮೊಬಲಗನ್ನು ನಿಯಂತ್ರಣ ಪ್ರಾಧಿಕಾರಿಯು ವಸೂಲು ಮಾಡುವ ಬಗ್ಗೆ ಉಪಬಂಧ ಕಲ್ಪಿಸಬಹುದು.

(5) ನಿಯೋಜಕನು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ವಿಮೆಗೆ, ಪ್ರೀಮಿಯಂ ರೂಪದಲ್ಲಿ ಅಥವಾ (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅನುಮೋದಿತ ಉಪದಾನ ನಿಧಿಗೆ ಕೊಡುಗೆಯ ರೂಪದಲ್ಲಿ ಯಾವುದೇ ಸಂದಾಯವನ್ನು ಮಾಡಲು ತಪ್ಪಿದಲ್ಲಿ, ಅವನು ಈ ಅಧಿನಿಯಮದ ಮೇರೆಗೆ ಬಾಕಿ ಉಳಿದಿರುವ ಉಪದಾನದ ಮೊಬಲಗನ್ನು ವಿಳಂಬಿತ ಸಂದಾಯಗಳಿಗೆ ಬಡ್ಡಿ ಏನಾದರೂ ಇದ್ದರೆ, ಅದರೊಂದಿಗೆ ತಕ್ಷಣ ನಿಯಂತ್ರಣ ಪ್ರಾಧಿಕಾರಿಗೆ ಸಂದಾಯ ಮಾಡಲು ಬದ್ಧನಾಗತಕ್ಕುದು.

(6) (5)ನೇ ಉಪಪ್ರಕರಣದ ಉಪಬಂಧಗಳನ್ನು ಯಾರೇ ಆಗಲಿ ಉಲ್ಲಂಘಿಸಿದರೆ, ಅವನು ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಮತ್ತು ಅಪರಾಧವು ಮುಂದುವರಿದ ಸಂದರ್ಭದಲ್ಲಿ ಅಪರಾಧ ಮುಂದುವರಿದ ಪ್ರತಿದಿನಕ್ಕೆ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಮತ್ತಷ್ಟು ಜುಲ್ಮಾನೆಯಿಂದ ದಂಡನೀಯನಾಗತಕ್ಕುದು.

ವಿವರಣೆ:- ಈ ಪ್ರಕರಣದಲ್ಲಿ, "ಅನುಮೋದಿತ ಉಪದಾನ ನಿಧಿ" ಎಂಬುದು, ಆದಾಯ ತೆರಿಗೆ ಅಧಿನಿಯಮ, 1961 (1961ರ 43)ರ 2ನೇ ಪ್ರಕರಣದ (5)ನೇ ಖಂಡದಲ್ಲಿರುವ ಅರ್ಥವನ್ನೇ ಹೊಂದಿರತಕ್ಕುದು.

5. ವಿನಾಯಿತಿಗೊಳಿಸಲು ಅಧಿಕಾರ:- (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮವು ಅನ್ವಯವಾಗುವ ಯಾವುದೇ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಯಲ್ಲಿ, ನಿಯೋಜಿತರು, ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಪ್ರಯೋಜನಗಳಿಗಿಂತ ಕಡಿಮೆ ಅನುಕೂಲಕರವಲ್ಲದ ಉಪದಾನ ಅಥವಾ ನಿವೃತ್ತಿ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆಂದು ಅಭಿಪ್ರಾಯ ಪಟ್ಟರೆ, ಸಮುಚಿತ ಸರ್ಕಾರವು, ಅಂಥ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಯನ್ನು ಈ ಅಧಿನಿಯಮದ ಉಪಬಂಧಗಳ ಪ್ರವರ್ತನೆಯಿಂದ ವಿನಾಯಿತಿಗೊಳಿಸಬಹುದು.

(2) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಮತ್ತು ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು, ಈ ಅಧಿನಿಯಮವು ಅನ್ವಯವಾಗುವ ಯಾವುದೇ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಯಲ್ಲಿ ಯಾರೇ ನಿಯೋಜಿತನನ್ನು ಅಥವಾ ನಿಯೋಜಿತರ ವರ್ಗವನ್ನು, ಅಂಥ ನಿಯೋಜಿತನು ಅಥವಾ ಅಂಥ ನಿಯೋಜಿತರ ವರ್ಗವು ಈ ಅಧಿನಿಯಮದ ಮೇರೆಗೆ ಪ್ರದತ್ತವಾದ ಪ್ರಯೋಜನಗಳಿಗಿಂತ ಕಡಿಮೆ ಅನುಕೂಲಕರವಲ್ಲದ ಪ್ರಯೋಜನಗಳನ್ನು ಪಡೆಯುತ್ತಿದ್ದಾರೆಂದು ಅಭಿಪ್ರಾಯ ಪಟ್ಟರೆ, ಆ ಸಮುಚಿತ ಸರ್ಕಾರವು ಈ ಅಧಿನಿಯಮದ ಉಪಬಂಧಗಳ ಪ್ರವರ್ತನೆಯಿಂದ ವಿನಾಯಿತಿಗೊಳಿಸಬಹುದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಹೊರಡಿಸಲಾಗುವ ಅಧಿಸೂಚನೆಯನ್ನು, ಈ ಅಧಿನಿಯಮದ ಪ್ರಾರಂಭದ ದಿನಾಂಕಕ್ಕಿಂತ ಮುಂಚಿತವಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ ಹೊರಡಿಸಬಹುದು. ಆದರೆ, ಅಂಥ ಯಾವುದೇ ಅಧಿಸೂಚನೆಯನ್ನು ಯಾರೇ ವ್ಯಕ್ತಿಯ ಹಿತಾಸಕ್ತಿಗಳಿಗೆ ಪ್ರತಿಕೂಲ ಪರಿಣಾಮ ಉಂಟಾಗುವಂತೆ ಹೊರಡಿಸತಕ್ಕುದಲ್ಲ.

6. ನಾಮನಿರ್ದೇಶನ:- (1) ಒಂದು ವರ್ಷದ ಸೇವೆಯನ್ನು ಪೂರ್ಣಗೊಳಿಸಿದ ಪ್ರತಿಯೊಬ್ಬ ನಿಯೋಜಿತನು, 4ನೆಯ ಪ್ರಕರಣದ (1)ನೆಯ ಉಪಪ್ರಕರಣದ ಎರಡನೆಯ ಪರಂತುಕದ ಉದ್ದೇಶಗಳಿಗಾಗಿ, ನಿಯಮಿಸಬಹುದಾದಂಥ ಕಾಲದೊಳಗೆ ಅಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ನಾಮನಿರ್ದೇಶನ ಮಾಡತಕ್ಕುದು.

(2) ನಿಯೋಜಿತನು, ತನ್ನ ನಾಮನಿರ್ದೇಶನದಲ್ಲಿ, ಈ ಅಧಿನಿಯಮದ ಮೇರೆಗೆ ಅವನಿಗೆ ಸಂದಾಯವಾಗಬೇಕಾದ ಉಪದಾನದ ಮೊಬಲಗನ್ನು ಒಬ್ಬನಿಗಿಂತ ಹೆಚ್ಚು ನಾಮನಿರ್ದೇಶಿತರಲ್ಲಿ ಹಂಚಬಹುದು.

(3) ನಾಮನಿರ್ದೇಶನ ಮಾಡುವ ಕಾಲದಲ್ಲಿ ನಿಯೋಜಿತನು ಕುಟುಂಬವನ್ನು ಹೊಂದಿದ್ದರೆ, ತನ್ನ ಕುಟುಂಬದ ಒಬ್ಬ ಅಥವಾ ಹೆಚ್ಚು ಜನ ಸದಸ್ಯರ ಪರವಾಗಿ ನಾಮನಿರ್ದೇಶನ ಮಾಡತಕ್ಕುದು ಮತ್ತು ಅಂಥ ನಿಯೋಜಿತನು ತನ್ನ ಕುಟುಂಬದ ಸದಸ್ಯನಲ್ಲದ ವ್ಯಕ್ತಿಯ ಪರವಾಗಿ ಮಾಡಿದ ಯಾವುದೇ ನಾಮ ನಿರ್ದೇಶನವು ಶೂನ್ಯವಾಗತಕ್ಕುದು.

(4) ನಾಮನಿರ್ದೇಶನ ಮಾಡುವ ಕಾಲದಲ್ಲಿ ನಿಯೋಜಿತನು ಕುಟುಂಬವನ್ನು ಹೊಂದಿರದಿದ್ದರೆ, ನಾಮನಿರ್ದೇಶನವನ್ನು ಯಾವನೇ ವ್ಯಕ್ತಿ ಅಥವಾ ವ್ಯಕ್ತಿಗಳ ಪರವಾಗಿ ಮಾಡಬಹುದು. ಆದರೆ, ನಿಯೋಜಿತನು ಆ ತರುವಾಯ ಕುಟುಂಬವನ್ನು ಹೊಂದಿದರೆ, ಹಿಂದಿನ ನಾಮನಿರ್ದೇಶನವು ತತ್‌ಕ್ಷಣವೇ ಅಸಿಂಧುವಾಗತಕ್ಕುದು ಮತ್ತು ನಿಯೋಜಿತನು ನಿಯಮಿಸಬಹುದಾದಂಥ ಕಾಲದೊಳಗೆ ತನ್ನ ಕುಟುಂಬದ ಒಬ್ಬ ಅಥವಾ ಹೆಚ್ಚು ಸದಸ್ಯರ ಪರವಾಗಿ ಹೊಸ ನಾಮನಿರ್ದೇಶನವನ್ನು ಮಾಡತಕ್ಕುದು.

(5) ನಾಮನಿರ್ದೇಶನವನ್ನು, (3)ನೇ ಮತ್ತು (4)ನೇ ಉಪಪ್ರಕರಣಗಳ ಉಪಬಂಧಗಳಿಗೆ ಒಳಪಟ್ಟು ಯಾವುದೇ ಕಾಲದಲ್ಲಿ ನಿಯೋಜಿತನು, ಹಾಗೆ ಮಾರ್ಪಾಟು ಮಾಡುವ ತನ್ನ ಉದ್ದೇಶವನ್ನು ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ, ಲಿಖಿತ ನೋಟೀಸನ್ನು ತನ್ನ ನಿಯೋಜಕನಿಗೆ ಕೊಟ್ಟ ತರುವಾಯ ಮಾರ್ಪಾಟು ಮಾಡಬಹುದು.

(6) ನಾಮ ನಿರ್ದೇಶಿತನು ನಿಯೋಜಿತನಿಗಿಂತ ಮೊದಲು ಮರಣ ಹೊಂದಿದ್ದರೆ, ನಾಮ ನಿರ್ದೇಶಿತನ ಹಿತಾಸಕ್ತಿಯು ನಿಯೋಜಿತನಿಗೆ ಮರಳಿ ಬರತಕ್ಕುದು. ನಿಯೋಜಿತನು ಅಂಥ ಹಿತಾಸಕ್ತಿಗೆ ಸಂಬಂಧಿಸಿದಂತೆ, ನಿಯಮಿಸಲಾದ ನಮೂನೆಯಲ್ಲಿ ಒಂದು ಹೊಸ ನಾಮನಿರ್ದೇಶನವನ್ನು ಮಾಡತಕ್ಕುದು.

(7) ಸಂದರ್ಭಾನುಸಾರ ಪ್ರತಿಯೊಂದು ನಾಮನಿರ್ದೇಶನ, ಹೊಸ ನಾಮನಿರ್ದೇಶನ ಅಥವಾ ನಾಮನಿರ್ದೇಶನದ ಬದಲಾವಣೆಯನ್ನು ನಿಯೋಜಿತನು ತನ್ನ ನಿಯೋಜಕನಿಗೆ ಕಳುಹಿಸಿಕೊಡತಕ್ಕುದು, ಅವನು ಅದನ್ನು ತನ್ನ ಸುರಕ್ಷಿತ ಅಭಿರಕ್ಷೆಯಲ್ಲಿ ಇಟ್ಟುಕೊಳ್ಳತಕ್ಕುದು.

7. ಉಪದಾನದ ಮೊಬಲಗಿನ ನಿರ್ಧರಣೆ:- (1) ಈ ಅಧಿನಿಯಮದ ಮೇರೆಗೆ ಉಪದಾನದ ಸಂದಾಯಕ್ಕೆ ಅರ್ಹನಾದ ವ್ಯಕ್ತಿ ಅಥವಾ ಅವನ ಪರವಾಗಿ ಕಾರ್ಯ ನಡೆಸಲು ಬರಹದಲ್ಲಿ ಅಧಿಕೃತನಾದ ಯಾರೇ ವ್ಯಕ್ತಿಯು, ಅಂಥ ಉಪದಾನದ ಸಂದಾಯಕ್ಕಾಗಿ, ನಿಯೋಜಕನಿಗೆ ಬರಹದಲ್ಲಿ ಅರ್ಜಿಯನ್ನು ನಿಯಮಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ನಮೂನೆಯಲ್ಲಿ ಕಳುಹಿಸತಕ್ಕುದು.

(2) ಉಪದಾನವು ಸಂದಾಯವಾಗಬೇಕಾದ ಕೂಡಲೇ, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ಅರ್ಜಿಯನ್ನು ಹಾಕಿಕೊಂಡಿರಲಿ ಅಥವಾ ಹಾಕಿಕೊಂಡಿಲ್ಲದಿರಲಿ, ನಿಯೋಜಕನು ಉಪದಾನದ ಮೊಬಲಗನ್ನು ನಿರ್ಧರಿಸತಕ್ಕುದು ಮತ್ತು ಹಾಗೆ ನಿರ್ಧರಿಸಿದ ಉಪದಾನದ ಮೊಬಲಗನ್ನು ನಿರ್ದಿಷ್ಟಪಡಿಸಿ, ಯಾರಿಗೆ ಉಪದಾನ ಸಂದಾಯವಾಗಬೇಕಾಗಿದೆಯೋ ಆ ವ್ಯಕ್ತಿಗೆ ಮತ್ತು ನಿಯಂತ್ರಣ ಪ್ರಾಧಿಕಾರಿಗೂ ಸಹ ಬರಹದಲ್ಲಿ ನೋಟೀಸನ್ನು ಕೊಡತಕ್ಕುದು.

(3) ಯಾವ ವ್ಯಕ್ತಿಗೆ ಉಪದಾನವನ್ನು ಸಂದಾಯ ಮಾಡಬೇಕಾಗಿದೆಯೋ ಆ ವ್ಯಕ್ತಿಗೆ ಉಪದಾನವು ಸಂದಾಯವಾಗಬೇಕಾದ ದಿನಾಂಕದಿಂದ ಮೂವತ್ತು ದಿವಸಗಳೊಳಗಾಗಿ ನಿಯೋಜಕನು ಉಪದಾನದ ಮೊಬಲಗನ್ನು ಸಂದಾಯ ಮಾಡಲು ವ್ಯವಸ್ಥೆ ಮಾಡತಕ್ಕುದು.

(3ಎ) (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಉಪದಾನದ ಮೊಬಲಗನ್ನು (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅವಧಿಯೊಳಗೆ ನಿಯೋಜಕನು ಸಂದಾಯ ಮಾಡದಿದ್ದರೆ, ಉಪದಾನವು ಸಂದಾಯವಾಗಬೇಕಾದ ದಿನಾಂಕದಿಂದ, ಅದನ್ನು ಸಂದಾಯ ಮಾಡುವ ದಿನಾಂಕದವರೆಗೆ, ಕೇಂದ್ರ ಸರ್ಕಾರವು, ದೀರ್ಘಾವಧಿ ಠೇವಣಿಗಳ ಮರು ಸಂದಾಯಕ್ಕಾಗಿ ಕಾಲಕಾಲಕ್ಕೆ ಅಧಿಸೂಚಿಸಿದ ದರಕ್ಕಿಂತ ಹೆಚ್ಚಿಲ್ಲದಂತೆ, ಆ ಸರ್ಕಾರವು ಅಧಿಸೂಚನೆ ಮೂಲಕ ನಿರ್ದಿಷ್ಟಪಡಿಸಬಹುದಾದ ದರದಲ್ಲಿ ಸರಳ ಬಡ್ಡಿಯನ್ನು ನಿಯೋಜಕನು ಸಂದಾಯ ಮಾಡತಕ್ಕುದು:

ಪರಂತು, ಸಂದಾಯ ಮಾಡಲು ಉಂಟಾದ ವಿಳಂಬವು ನೌಕರನ ತಪ್ಪಿನಿಂದಾಗಿದ್ದರೆ, ಮತ್ತು ಈ ಆಧಾರದ ಮೇಲೆ ನಿಯೋಜಕನು ಆ ವಿಳಂಬಿತ ಸಂದಾಯದ ಬಗ್ಗೆ ನಿಯಂತ್ರಕ ಪ್ರಾಧಿಕಾರಿಯಿಂದ ಲಿಖಿತದಲ್ಲಿ ಅನುಮತಿ ಪಡೆದಿದ್ದರೆ, ಅಂತಹ ಬಡ್ಡಿಯನ್ನು ಸಂದಾಯ ಮಾಡತಕ್ಕುದಲ್ಲ.

(4) (ಎ) ಈ ಅಧಿನಿಯಮದ ಮೇರೆಗೆ ನಿಯೋಜಿತನಿಗೆ ಸಂದಾಯವಾಗಬೇಕಾದ ಉಪದಾನದ ಮೊಬಲಗಿನ ಬಗ್ಗೆ ಅಥವಾ ಉಪದಾನದ ಸಂದಾಯಕ್ಕಾಗಿ ನಿಯೋಜಿತನ ಅಥವಾ ಅವನಿಗೆ ಸಂಬಂಧಪಟ್ಟ ಯಾವುದೇ ಕ್ಲೇಮಿನ ಅಂಗೀಕಾರದ ಬಗ್ಗೆ ಅಥವಾ ಆ ಉಪದಾನವನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಯ ಬಗ್ಗೆ ಯಾವುದೇ ವಿವಾದ ಉಂಟಾದರೆ, ನಿಯೋಜಕನು, ತನ್ನಿಂದ ಉಪದಾನವಾಗಿ ಸಂದಾಯವಾಗಬೇಕಾಗಿದೆಯೆಂದು ನಿಯಂತ್ರಣ ಪ್ರಾಧಿಕಾರಿಯು ಒಪ್ಪುವಂಥ ಮೊಬಲಗನ್ನು, ಅವನಲ್ಲಿ ಠೇವಣಿ ಇಡತಕ್ಕುದು.

[ವಿವರಣೆ:- * * * * * ]

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ವಿಷಯದ ಅಥವಾ ವಿಷಯಗಳ ಬಗ್ಗೆ ವಿವಾದವಿರುವಲ್ಲಿ, ನಿಯೋಜಕನು ಅಥವಾ ನಿಯೋಜಿತನು ಅಥವಾ ವಿವಾದವನ್ನು ಎತ್ತುವ ಇತರ ಯಾರೇ ವ್ಯಕ್ತಿಯು ವಿವಾದವನ್ನು ತೀರ್ಮಾನಿಸುವುದಕ್ಕಾಗಿ ನಿಯಂತ್ರಣ ಪ್ರಾಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದು.

(ಸಿ) ನಿಯಂತ್ರಣ ಪ್ರಾಧಿಕಾರಿಯು, ಸೂಕ್ತ ವಿಚಾರಣೆಯನ್ನು ನಡೆಸಿದ ತರುವಾಯ ಮತ್ತು ಆ ವಿವಾದದ ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ, ವಿವಾದದಲ್ಲಿರುವ ವಿಷಯ ಅಥವಾ ವಿಷಯಗಳನ್ನು ನಿರ್ಧರಿಸತಕ್ಕುದು ಮತ್ತು ಅಂಥ ವಿಚಾರಣೆಯ ಪರಿಣಾಮವಾಗಿ, ಯಾವುದೇ ಮೊಬಲಗು ನಿಯೋಜಿತನಿಗೆ ಸಂದಾಯವಾಗಬೇಕಾಗಿದೆಯೆಂದು ಕಂಡುಬಂದರೆ, ನಿಯಂತ್ರಣ ಪ್ರಾಧಿಕಾರಿಯು, ಸಂದರ್ಭಾನುಸಾರ ಅಂಥ ಮೊಬಲಗನ್ನು ಅಥವಾ ನಿಯೋಜಿತನು ಈಗಾಗಲೇ ಠೇವಣಿ ಮಾಡಿರುವ ಮೊಬಲಗನ್ನು ಕಳೆದ ತರುವಾಯ ಕಡಿಮೆಯಾದಂಥ ಮೊಬಲಗನ್ನು ಸಂದಾಯ ಮಾಡಬೇಕೆಂದು ನಿಯೋಜಕನಿಗೆ ನಿರ್ದೇಶಿಸತಕ್ಕುದು.

(ಡಿ) ನಿಯಂತ್ರಣ ಪ್ರಾಧಿಕಾರಿಯು, ಹೆಚ್ಚಿನ ಮೊಬಲಗು ಯಾವುದಾದರೂ ಇದ್ದರೆ, ಅದನ್ನೂ ಒಳಗೊಂಡಂತೆ, ನಿಯೋಜಕನು ಠೇವಣಿಯಿಟ್ಟ ಮೊಬಲಗನ್ನು ಅದಕ್ಕೆ ಹಕ್ಕುಳ್ಳ ವ್ಯಕ್ತಿಗೆ ಸಂದಾಯ ಮಾಡತಕ್ಕುದು.

(ಇ) (ಎ) ಖಂಡದ ಮೇರೆಗೆ ಠೇವಣಿ ಇಟ್ಟ ತರುವಾಯ ಆದಷ್ಟು ಬೇಗನೆ, ನಿಯಂತ್ರಣ ಪ್ರಾಧಿಕಾರಿಯು, ಠೇವಣಿಯ ಮೊಬಲಗನ್ನು, -

(i) ಅರ್ಜಿದಾರನು, ನಿಯೋಜಿತನಾಗಿರುವಲ್ಲಿ, ಅವನಿಗೆ; ಅಥವಾ

(ii) ಅರ್ಜಿದಾರನು ನಿಯೋಜಿತನಾಗಿರದಿರುವಲ್ಲಿ, ಉಪದಾನದ ಮೊಬಲಗನ್ನು ಸ್ವೀಕರಿಸಲು ಅರ್ಜಿದಾರನ ಹಕ್ಕಿನ ಸಂಬಂಧದಲ್ಲಿ ಯಾವುದೇ ವಿವಾದವಿಲ್ಲವೆಂದು ನಿಯಂತ್ರಣ ಪ್ರಾಧಿಕಾರಿಗೆ ಮನದಟ್ಟಾದರೆ, ನಿಯೋಜಿತನ ನಾಮನಿರ್ದೇಶಿತನಿಗೆ ಅಥವಾ, ಸಂದರ್ಭಾನುಸಾರ ಅಂಥ ನಾಮನಿರ್ದೇಶಿತನ ಪಾಲಕನಿಗೆ ಅಥವಾ ವಾರಸುದಾರನಿಗೆ

- ಸಂದಾಯ ಮಾಡತಕ್ಕುದು.

(5) (4)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ನಿಯಂತ್ರಣ ಪ್ರಾಧಿಕಾರಿಯು, ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (1908ರ 5) ಮೇರೆಗೆ ದಾವೆಯನ್ನು ಅಧಿವಿಚಾರಣೆ ಮಾಡುವಾಗ, ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕುದು, ಎಂದರೆ:-

(ಎ) ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸುವುದು ಅಥವಾ ಪ್ರಮಾಣದ ಮೇಲೆ ಅವನನ್ನು ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಕಂಡುಹಿಡಿಯುವುದು ಮತ್ತು ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ ಮೇಲೆ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿಗಳ ಪರೀಕ್ಷೆಗಾಗಿ ಕಮಿಷನ್‌ಗಳನ್ನು ಹೊರಡಿಸುವುದು.

(6) ಈ ಪ್ರಕರಣದ ಮೇರೆಗೆ ಯಾವುದೇ ವಿಚಾರಣೆಯು, ಭಾರತ ದಂಡ ಸಂಹಿತೆಯ ಪ್ರಕರಣ 193 ಮತ್ತು 228ರ ಅರ್ಥವ್ಯಾಪ್ತಿಯೊಳಗೆ ಮತ್ತು 196ನೇ ಪ್ರಕರಣದ ಉದ್ದೇಶಕ್ಕಾಗಿ, ನ್ಯಾಯಿಕ ವ್ಯವಹರಣೆಯಾಗಿರತಕ್ಕುದು.

(7) (4)ನೇ ಉಪಪ್ರಕರಣದ ಮೇರೆಗಿನ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಅರವತ್ತು ದಿನಗಳೊಳಗೆ, ಸಮುಚಿತ ಸರ್ಕಾರಕ್ಕೆ ಅಥವಾ ಆ ಬಗ್ಗೆ ಸಮುಚಿತ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಇತರ ಪ್ರಾಧಿಕಾರಿಗೆ ಅಪೀಲು ಮಾಡಿಕೊಳ್ಳಬಹುದು:

ಪರಂತು, ಸಂದರ್ಭಾನುಸಾರ ಸಮುಚಿತ ಸರ್ಕಾರ ಅಥವಾ ಅಪೀಲು ಪ್ರಾಧಿಕಾರಿಗೆ, ಅಪೀಲುದಾರನು ಸದರಿ ಅರವತ್ತು ದಿನಗಳ ಅವಧಿಯೊಳಗೆ ಅಪೀಲು ಮಾಡಿಕೊಳ್ಳಲು ಸಾಧ್ಯವಾಗದಿರುವುದಕ್ಕೆ ಸಾಕಷ್ಟು ಕಾರಣ ಇದ್ದಿತೆಂದು ಮನದಟ್ಟಾದರೆ, ಸದರಿ ಅವಧಿಯನ್ನು ಇನ್ನೂ ಹೆಚ್ಚಿನ ಅರವತ್ತು ದಿನಗಳವರೆಗೆ ವಿಸ್ತರಿಸಬಹುದು:

ಮತ್ತೂ ಪರಂತು, ನಿಯೋಜಕನ ಯಾವುದೇ ಅಪೀಲನ್ನು, ಆ ಅಪೀಲನ್ನು ಮಾಡಿಕೊಳ್ಳುವ ಕಾಲದಲ್ಲಿ ಅಪೀಲುದಾರನು, (4)ನೇ ಉಪಪ್ರಕರಣದ ಮೇರೆಗೆ ಠೇವಣಿಯಿಡಲು ಅಗತ್ಯಪಡಿಸಲಾದ ಉಪದಾನದ ಮೊಬಲಗಿಗೆ ಸಮನಾದ ಮೊಬಲಗನ್ನು ನಿಯಂತ್ರಣ ಪ್ರಾಧಿಕಾರಿಯ ಬಳಿ ಠೇವಣಿಯಿಟ್ಟಿದ್ದಾನೆಂಬ ಬಗ್ಗೆ ಆ ನಿಯಂತ್ರಣ ಪ್ರಾಧಿಕಾರಿಯ ಪ್ರಮಾಣ ಪತ್ರವನ್ನು ಹಾಜರುಪಡಿಸುವ ಅಥವಾ ಅಂಥ ಮೊಬಲಗನ್ನು ಅಪೀಲು ಪ್ರಾಧಿಕಾರಿಯ ಬಳಿ ಠೇವಣಿ ಇಡುವ ಹೊರತು, ಅಂಗೀಕರಿಸತಕ್ಕುದಲ್ಲ.

(8) ಸಂದರ್ಭಾನುಸಾರ ಸಮುಚಿತ ಸರ್ಕಾರ ಅಥವಾ ಅಪೀಲು ಪ್ರಾಧಿಕಾರಿಯು ಅಪೀಲಿನ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ ನಿಯಂತ್ರಣ ಪ್ರಾಧಿಕಾರಿಯ ತೀರ್ಮಾನವನ್ನು ಸ್ಥಿರೀಕರಿಸಬಹುದು, ಮಾರ್ಪಾಟು ಮಾಡಬಹುದು ಅಥವಾ ವಿಪರ್ಯಯಗೊಳಿಸಬಹುದು.

7ಎ. ಪರಿಶೀಲಕರು:- (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳಿಗಾಗಿ, ತಾನು ಸೂಕ್ತವೆಂದು ಭಾವಿಸಬಹುದಾದಷ್ಟು ಸಂಖ್ಯೆಯ ಪರಿಶೀಲಕರನ್ನು ನೇಮಿಸಬಹುದು.

(2) ಸಮುಚಿತ ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ, ಹಾಗೆ ನೇಮಕಗೊಂಡ ಪರಿಶೀಲಕನ ಪ್ರಾಧಿಕಾರವು ಯಾವ ಪ್ರದೇಶದೊಳಗೆ ವಿಸ್ತರಿಸತಕ್ಕದ್ದೋ ಆ ಪ್ರದೇಶವನ್ನು ನಿರ್ಧರಿಸಬಹುದು ಮತ್ತು ಒಂದೇ ಪ್ರದೇಶಕ್ಕೆ ಇಬ್ಬರು ಅಥವಾ ಹೆಚ್ಚು ಪರಿಶೀಲಕರು ನೇಮಕಗೊಂಡಿರುವಲ್ಲಿ, ಈ ಅಧಿನಿಯಮದ ಮೇರೆಗೆ ಅವರು ನೆರವೇರಿಸಬೇಕಾದ ಕೆಲಸವನ್ನು ವಿತರಣೆ ಅಥವಾ ಹಂಚಿಕೆ ಮಾಡುವ ಬಗ್ಗೆ ಸಹ ಅಂಥ ಆದೇಶದ ಮೂಲಕ ಉಪಬಂಧಿಸಬಹುದು.

(3) ಪ್ರತಿಯೊಬ್ಬ ಪರಿಶೀಲಕನನ್ನು, ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯಲ್ಲಿ ಲೋಕನೌಕರನೆಂದು ಭಾವಿಸತಕ್ಕದ್ದು.

7ಬಿ. ಪರಿಶೀಲಕರ ಅಧಿಕಾರಗಳು:- (1) ಸಮುಚಿತ ಸರ್ಕಾರವು, ಈ ಬಗ್ಗೆ ಮಾಡಿದ ಯಾವುದೇ ನಿಯಮಗಳಿಗೆ ಒಳಪಟ್ಟು, ಪರಿಶೀಲಕನು, ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅಥವಾ ಅದರ ಮೇರೆಗೆ ನೀಡಲಾದ ಯಾವುದೇ ವಿನಾಯಿತಿಯ ಯಾವುವಾದರೂ ಷರತ್ತುಗಳು ಇದ್ದರೆ ಅವುಗಳನ್ನು ಪಾಲಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವ ಉದ್ದೇಶಕ್ಕಾಗಿ ಕೆಳಕಂಡ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸಬಹುದು, ಎಂದರೆ:-

(ಎ) ತಾನು ಅವಶ್ಯವೆಂದು ಭಾವಿಸಬಹುದಾದಂಥ ಮಾಹಿತಿಯನ್ನು ಒದಗಿಸುವಂತೆ ನಿಯೋಜಕನನ್ನು ಅಗತ್ಯಪಡಿಸಬಹುದು;

(ಬಿ) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಇಡಲು ಅಥವಾ ಪ್ರದರ್ಶಿಸಲು ಅಗತ್ಯಪಡಿಸಲಾಗಿರುವ ಅಥವಾ ಯಾರೇ ವ್ಯಕ್ತಿಯ ನಿಯೋಜನೆಗೆ ಅಥವಾ ನಿಯೋಜಿತರಿಗೆ ಉಪದಾನದ ಸಂದಾಯಕ್ಕೆ ಸಂಬಂಧಿಸಿದಂತೆ ಅನ್ಯಥಾ ಇಡಲಾದ ಅಥವಾ ಪ್ರದರ್ಶಿಸಲಾದ ಯಾವುದೇ ರಿಜಿಸ್ಟರು, ದಾಖಲೆ ಅಥವಾ ನೋಟೀಸು ಅಥವಾ ಇತರ ದಸ್ತಾವೇಜನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ, ಈ ಅಧಿನಿಯಮವು ಅನ್ವಯವಾಗುವ ಯಾವುದೇ ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ, ಅಂಗಡಿ ಅಥವಾ ಇತರ ವ್ಯವಸ್ಥಾಪನೆಯ ಯಾವುವೇ ಆವರಣಗಳಲ್ಲಿ ಅಥವಾ ಸ್ಥಳಗಳಲ್ಲಿ ತಾನು ಸೂಕ್ತವೆಂದು ಆಲೋಚಿಸುವಂಥ ಸರ್ಕಾರದ ಅಥವಾ ಸ್ಥಳೀಯ ಅಥವಾ ಇತರ ಸಾರ್ವಜನಿಕ ಪ್ರಾಧಿಕಾರದ ಸೇವೆಯಲ್ಲಿರುವ ವ್ಯಕ್ತಿಗಳಾಗಿರುವಂಥ ಸಹಾಯಕರು (ಯಾರಾದರೂ ಇದ್ದರೆ) ಅವರೊಂದಿಗೆ ಎಲ್ಲ ಯುಕ್ತ ಕಾಲದಲ್ಲಿ ಪ್ರವೇಶಿಸಬಹುದು ಹಾಗೂ ಅವುಗಳನ್ನು ಪರಿಶೀಲಿಸಬಹುದು, ಮತ್ತು ಪರಿಶೀಲನೆಗಾಗಿ ಅವುಗಳನ್ನು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು;

(ಸಿ) ಮೇಲೆ ಹೇಳಿದ ಯಾವುದೇ ಉದ್ದೇಶಕ್ಕೆ ಸುಸಂಗತವಾದ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ, ಅಂಥ ಆವರಣಗಳಲ್ಲಿ ಅಥವಾ ಸ್ಥಳದಲ್ಲಿ ಅವನಿಗೆ ಕಂಡುಬರುವ ನಿಯೋಜಕನನ್ನು ಅಥವಾ ಅದರಲ್ಲಿ ನಿಯೋಜಿತನಾಗಿರುವ ನಿಯೋಜಿತನೆಂದು ನಂಬಲು ಯುಕ್ತ ಕಾರಣವಿರುವಂಥ ಯಾವನೇ ವ್ಯಕ್ತಿಯನ್ನು ಪರೀಕ್ಷಿಸಬಹುದು;

(ಡಿ) ತಾನು ಸುಸಂಗತವೆಂದು ಭಾವಿಸಬಹುದಾದಂಥ ಯಾವುದೇ ರಿಜಿಸ್ಟರು, ದಾಖಲೆ, ನೋಟೀಸು ಅಥವಾ ಇತರ ದಸ್ತಾವೇಜಿನ ಪ್ರತಿಗಳನ್ನು ಮಾಡಿಕೊಳ್ಳಬಹುದು, ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಬಹುದು ಮತ್ತು ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ನಿಯೋಜಕನು ಮಾಡಿದ್ದಾನೆಂದು ನಂಬಲು ಕಾರಣವಿರುವಲ್ಲಿ, ತಾನು ಸೂಕ್ತವೆಂದು ಪರ್ಯಾಲೋಚಿಸುವ ಸಹಾಯದೊಂದಿಗೆ, ಆ ಅಪರಾಧಕ್ಕೆ ಸಂಬಂಧಪಟ್ಟಂತೆ ಸುಸಂಗತವಾಗಿದೆಯೆಂದು ತಾನು ಪರಿಗಣಿಸಬಹುದಾದಂಥ ರಿಜಿಸ್ಟರು, ದಾಖಲೆ, ನೋಟೀಸು ಅಥವಾ ಇತರ ದಸ್ತಾವೇಜನ್ನು ಶೋಧಿಸಬಹುದು ಹಾಗೂ ಅಭಿಗ್ರಹಣ ಮಾಡಿಕೊಳ್ಳಬಹುದು;

(ಇ) ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(2) (1)ನೇ ಉಪ-ಪ್ರಕರಣದ ಮೇರೆಗೆ ಯಾವುದೇ ರಿಜಿಸ್ಟರು, ದಾಖಲೆ, ನೋಟೀಸು ಅಥವಾ ಇತರ ದಸ್ತಾವೇಜನ್ನು ಹಾಜರುಪಡಿಸಲು ಅಥವಾ ಯಾವುದೇ ಮಾಹಿತಿಯನ್ನು ಕೊಡಲು ಪರಿಶೀಲಕನಿಂದ ಅಗತ್ಯಪಡಿಸಲಾದ ಯಾವನೇ ವ್ಯಕ್ತಿಯನ್ನು ಭಾರತ ದಂಡ ಸಂಹಿತೆಯ (1860ರ 45) 175ನೇ ಮತ್ತು 176ನೇ ಪ್ರಕರಣಗಳ ಅರ್ಥವ್ಯಾಪ್ತಿಯಲ್ಲಿ, ಹಾಗೆ ಮಾಡಲು ಕಾನೂನುಸಮ್ಮತವಾಗಿ ಬದ್ಧನಾದ ವ್ಯಕ್ತಿಯೆಂದು ಭಾವಿಸತಕ್ಕದ್ದು.

(3) ದಂಡ ಪ್ರಕ್ರಿಯಾ ಸಂಹಿತೆ, 1973ರ ಉಪಬಂಧಗಳು, ಸಾಧ್ಯವಾಗಬಹುದಾದಷ್ಟು ಮಟ್ಟಿಗೆ, ಆ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಲಾದ ವಾರಂಟಿನ ಪ್ರಾಧಿಕಾರದ ಮೇರೆಗೆ ಮಾಡಲಾಗುವ ಯಾವುದೇ ಶೋಧನೆಗೆ ಅಥವಾ ಅಭಿಗ್ರಹಣಕ್ಕೆ ಅನ್ವಯವಾಗುವಂತೆಯೇ ಈ ಪ್ರಕರಣದ ಮೇರೆಗಿನ ಯಾವುದೇ ಶೋಧನೆಗೆ ಅಥವಾ ಅಭಿಗ್ರಹಣಕ್ಕೆ ಅನ್ವಯಿಸತಕ್ಕದ್ದು.

8. ಉಪದಾನದ ವಸೂಲಿ:- ಈ ಅಧಿನಿಯಮದ ಮೇರೆಗೆ ಸಂದಾಯವಾಗಬೇಕಾದ ಉಪದಾನದ ಮೊಬಲಗನ್ನು ನಿರ್ದಿಷ್ಟಪಡಿಸಿದ ಕಾಲದೊಳಗೆ, ಅದನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗೆ, ನಿಯೋಜಕನು ಸಂದಾಯ ಮಾಡದಿದ್ದರೆ, ನಿಯಂತ್ರಣ ಪ್ರಾಧಿಕಾರಿಯು, ಬಾಧಿತ ವ್ಯಕ್ತಿಯು ಈ ಬಗ್ಗೆ ತನಗೆ ಸಲ್ಲಿಸಿದ ಅರ್ಜಿಯ ಮೇಲೆ, ಆ ಮೊಬಲಗಿಗಾಗಿ ಒಂದು ಪ್ರಮಾಣಪತ್ರವನ್ನು ಕಲೆಕ್ಟರನಿಗೆ ಕೊಡತಕ್ಕದ್ದು; ಅವನು ಅದನ್ನು ನಿಯಮಿಸಿದ ಕಾಲವು ಮುಕ್ತಾಯವಾದ ದಿನಾಂಕದಿಂದ ಕೇಂದ್ರ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ದರದಲ್ಲಿ, ಅದರ ಮೇಲೆ ವಿಧಿಸಿದ ಚಕ್ರಬಡ್ಡಿಯೊಂದಿಗೆ ಭೂ ಕಂದಾಯದ ಬಾಕಿಗಳಂತೆ ವಸೂಲು ಮಾಡತಕ್ಕದ್ದು ಮತ್ತು ಅದಕ್ಕೆ ಹಕ್ಕುಳ್ಳ ವ್ಯಕ್ತಿಗೆ ಅದನ್ನು ಸಂದಾಯ ಮಾಡತಕ್ಕದ್ದು:

ಪರಂತು, ನಿಯಂತ್ರಣ ಪ್ರಾಧಿಕಾರಿಯು, ಈ ಪ್ರಕರಣದ ಮೇರೆಗೆ ಪ್ರಮಾಣಪತ್ರವನ್ನು ನೀಡುವ ಮೊದಲು, ಅಂತಹ ಪ್ರಮಾಣಪತ್ರವನ್ನು ನೀಡುವುದರ ವಿರುದ್ಧ ಕಾರಣವನ್ನು ತೋರಿಸಲು ನಿಯೋಜಕನಿಗೆ ಸೂಕ್ತ ಅವಕಾಶವನ್ನು ನೀಡತಕ್ಕದ್ದು:

ಮತ್ತೂ ಪರಂತು, ಈ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಬಡ್ಡಿಯ ಮೊಬಲಗು, ಯಾವ ಸಂದರ್ಭದಲ್ಲೂ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾದ ಉಪದಾನ ಮೊಬಲಗನ್ನು ಮೀರತಕ್ಕದ್ದಲ್ಲ.

9. ದಂಡನೆಗಳು:- (1) ಈ ಅಧಿನಿಯಮದ ಮೇರೆಗೆ ತಾನು ಮಾಡಬೇಕಾಗಿರುವ, ಯಾವುದೇ ಸಂದಾಯವನ್ನು ತಪ್ಪಿಸುವ ಅಥವಾ ಅಂಥ ಸಂದಾಯವನ್ನು ತಪ್ಪಿಸುವುದಕ್ಕೆ ಯಾರೇ ಇತರ ವ್ಯಕ್ತಿಯನ್ನು ಸಮರ್ಥಗೊಳಿಸುವ ಉದ್ದೇಶಕ್ಕಾಗಿ ತಿಳಿದೂ ಯಾವುದೇ ಸುಳ್ಳು ಹೇಳಿಕೆ ಅಥವಾ ಸುಳ್ಳು ನಿರೂಪಣೆಯನ್ನು ಮಾಡಿದ ಅಥವಾ ಮಾಡಿಸಿದ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದ ದಂಡಿತನಾಗತಕ್ಕದ್ದು.

(2) ಈ ಅಧಿನಿಯಮದ ಯಾವುದೇ ಉಪಬಂಧಗಳು ಅಥವಾ ಅದರ ಮೇರೆಗೆ ಮಾಡಿದ ಯಾವುದೇ ನಿಯಮ ಅಥವಾ ಆದೇಶವನ್ನು ಉಲ್ಲಂಘಿಸುವ ಅಥವಾ ಅವುಗಳನ್ನು ಪಾಲಿಸಲು ತಪ್ಪುವ ನಿಯೋಜಕನು ಮೂರು ತಿಂಗಳುಗಳಿಗಿಂತ ಕಡಿಮೆ ಇರದ ಆದರೆ ಒಂದು ವರ್ಷದವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಹತ್ತು ಸಾವಿರ ರೂಪಾಯಿಗಳಿಗಿಂತ ಕಡಿಮೆ ಇರದ ಆದರೆ ಇಪ್ಪತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು:

ಪರಂತು, ಅಪರಾಧವು, ಈ ಅಧಿನಿಯಮದ ಮೇರೆಗೆ ಸಂದಾಯವಾಗಬೇಕಾದ ಯಾವುದೇ ಉಪದಾನವನ್ನು ಸಂದಾಯ ಮಾಡದಿರುವುದಕ್ಕೆ ಸಂಬಂಧಿಸಿರುವಲ್ಲಿ, ಅಪರಾಧವನ್ನು ಅಧಿವಿಚಾರಣೆ ಮಾಡುತ್ತಿರುವ ನ್ಯಾಯಾಲಯವು, ತಾನು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ, ಕಡಿಮೆ

ಅವಧಿಯ ಕಾರಾವಾಸವನ್ನು ಅಥವಾ ದಂಡವನ್ನು ವಿಧಿಸುವುದು ನ್ಯಾಯದ ಉದ್ದೇಶಗಳನ್ನು ಈಡೇರಿಸಬಲ್ಲದು ಎಂದು ಅಭಿಪ್ರಾಯಪಟ್ಟ ಹೊರತು, ನಿಯೋಜಕನು ಆರು ತಿಂಗಳುಗಳಿಗೆ ಕಡಿಮೆಯಿಲ್ಲದಂಥ ಆದರೆ ಎರಡು ವರ್ಷಗಳವರೆಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ದಂಡಿತನಾಗತಕ್ಕುದು.

10. ಕೆಲವು ಪ್ರಕರಣಗಳಲ್ಲಿ ಹೊಣೆಗಾರಿಕೆಯಿಂದ ನಿಯೋಜಕನಿಗೆ ವಿನಾಯಿತಿ:- ನಿಯೋಜಕನು ಈ ಅಧಿನಿಯಮದ ಮೇರೆಗೆ ದಂಡನೀಯವಾದ ಅಪರಾಧದ ಬಗ್ಗೆ ಆರೋಪಿತನಾಗಿರುವಲ್ಲಿ, ಅವನು ಕ್ರಮಬದ್ಧವಾಗಿ ಮಾಡಿದ ದೂರಿನ ಮೇಲೆ ಮತ್ತು ಹಾಗೆ ಮಾಡುವ ಅವನ ಉದ್ದೇಶವನ್ನು ಬರಹದಲ್ಲಿ ಸ್ಪಷ್ಟ ಮೂರು ದಿನಗಳಿಗೆ ಕಡಿಮೆಯಿಲ್ಲದ ನೋಟೀಸನ್ನು ಫಿರ್ಯಾದಿಗೆ ಕೊಟ್ಟಮೇಲೆ ಆರೋಪವನ್ನು ಸುನಾವಣೆ ಮಾಡಲು ನಿಗದಿಪಡಿಸಿದ ಕಾಲದಲ್ಲಿ, ವಾಸ್ತವ ಅಪರಾಧಿಯೆಂದು ತಾನು ಆರೋಪಿಸುವ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಕರೆಸಿಕೊಳ್ಳಲು ಅವನು ಹಕ್ಕುಳ್ಳವನಾಗಿರತಕ್ಕುದು ಮತ್ತು ಅಪರಾಧವನ್ನು ಮಾಡಿರುವುದು ರುಜುವಾತುಪಡಿಸಿದ ಮೇಲೆ ನಿಯೋಜಕನು, -

(ಎ) ತಾನು ಈ ಅಧಿನಿಯಮವನ್ನು ಜಾರಿಗೆ ತರಲು ಯುಕ್ತ ಶ್ರದ್ಧೆ ವಹಿಸಿದ್ದೆನೆಂದು; ಮತ್ತು

(ಬಿ) ಸದರಿ ಇತರ ವ್ಯಕ್ತಿಯು, ಪ್ರಶ್ನಿತವಾಗಿರುವ ಅಪರಾಧವನ್ನು ತನ್ನ ತಿಳುವಳಿಕೆ, ಸಮ್ಮತಿ, ಅಥವಾ ಪರೋಕ್ಷ ಸಮ್ಮತಿಯಿಲ್ಲದೆ ಮಾಡಿದ್ದಾನೆಂದು

- ನ್ಯಾಯಾಲಯಕ್ಕೆ ಮನದಟ್ಟಾಗುವಂತೆ ರುಜುವಾತುಪಡಿಸಿದರೆ, ಆ ಇತರ ವ್ಯಕ್ತಿಯನ್ನು ಆ ಅಪರಾಧದ ಬಗ್ಗೆ ಅಪರಾಧಿಯೆಂದು ನಿರ್ಣಯಿಸತಕ್ಕುದು ಮತ್ತು ಅವನು ನಿಯೋಜಕನಾಗಿದ್ದರೆ ಹೇಗೋ ಹಾಗೆ ಅದೇ ಶಿಕ್ಷೆಗೆ ಗುರಿಯಾಗತಕ್ಕುದು ಮತ್ತು ನಿಯೋಜಕನನ್ನು, ಅಂಥ ಅಪರಾಧಕ್ಕೆ ಸಂಬಂಧಿಸಿದಂತೆ ಈ ಅಧಿನಿಯಮದ ಮೇರೆಗಿನ ಯಾವುದೇ ಹೊಣೆಗಾರಿಕೆಯಿಂದ ವಿಮೋಚನೆಗೊಳಿಸತಕ್ಕುದು:

ಪರಂತು, ಹಿಂದೆ ಹೇಳಿದಂತೆ ರುಜುವಾತುಪಡಿಸುವುದಕ್ಕಾಗಿ, ನಿಯೋಜಕನನ್ನು ಪ್ರಮಾಣದ ಮೇಲೆ ಪರೀಕ್ಷಿಸಬಹುದು ಮತ್ತು ಅವನು ಸಾಕ್ಷ್ಯವನ್ನು ಮತ್ತು ತನ್ನ ಬೆಂಬಲಕ್ಕಾಗಿ ಅವನು ಕರೆಯುವ ಸಾಕ್ಷಿದಾರನ ಸಾಕ್ಷ್ಯವನ್ನು ವಾಸ್ತವ ಅಪರಾಧಿಯೆಂದು ಅವನು ಆರೋಪಿಸಿರುವ ವ್ಯಕ್ತಿಯ ಪರವಾಗಿ ಮತ್ತು ಪ್ರಾಸಿಕ್ಯೂಟರಿನಿಂದ ಪಾಟೀಸವಾಲಿಗೆ ಒಳಪಡಿಸತಕ್ಕುದು:

ಮತ್ತೂ ಪರಂತು, ನಿಯೋಜಕನಿಂದ ವಾಸ್ತವ ಅಪರಾಧಿಯೆಂದು ಆರೋಪಿತನಾದ ವ್ಯಕ್ತಿಯನ್ನು ಆ ಆರೋಪದ ಸುನಾವಣೆಗೆ ನಿಗದಿಪಡಿಸಿದ ಕಾಲದಲ್ಲಿ ನ್ಯಾಯಾಲಯದ ಮುಂದೆ ತರಲಾಗದಿದ್ದರೆ, ನ್ಯಾಯಾಲಯವು ಮೂರು ತಿಂಗಳಿಗೆ ಮೀರದ ಅವಧಿಯವರೆಗೆ ಸುನಾವಣೆಯನ್ನು ಕಾಲಕಾಲಕ್ಕೆ ಮುಂದೂಡತಕ್ಕುದು ಮತ್ತು ಸದರಿ ಅವಧಿಯ ಮುಕ್ತಾಯದ ವೇಳೆಗೆ ವಾಸ್ತವ ಅಪರಾಧಿಯೆಂದು ಆರೋಪಿತನಾದ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಇನ್ನೂ ತರಲಾಗದಿದ್ದರೆ, ನ್ಯಾಯಾಲಯವು ನಿಯೋಜಕನ ವಿರುದ್ಧದ ಆರೋಪದ ಸುನಾವಣೆಯನ್ನು ಮಾಡಲು ಮುಂದುವರೆಯತಕ್ಕುದು ಮತ್ತು ಅಪರಾಧವು ರುಜುವಾತಾದರೆ, ನಿಯೋಜಕನನ್ನು ಅಪರಾಧಿಯೆಂದು ನಿರ್ಣಯಿಸತಕ್ಕುದು.

11. ಅಪರಾಧಗಳ ಸಂಜ್ಞಾನ:- (1) ಯಾವುದೇ ನ್ಯಾಯಾಲಯವು, ಸಮುಚಿತ ಸರ್ಕಾರದಿಂದ ಅಥವಾ ಅದರ ಅಧಿಕಾರದ ಮೇರೆಗೆ ಮಾಡಿದ ದೂರಿನ ಮೇಲಲ್ಲದೆ ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕುದಲ್ಲ:

ಪರಂತು, ಉಪದಾನ ಮೊಬಲಗನ್ನು, ನಿಯಮಿಸಿದ ಅವಧಿಯು ಮುಕ್ತಾಯವಾದಂದಿನಿಂದ ಆರು ತಿಂಗಳೊಳಗೆ ಸಂದಾಯ ಮಾಡಿರದಿದ್ದರೆ ಅಥವಾ ವಸೂಲಿ ಮಾಡಿರದಿದ್ದರೆ, ಸಮುಚಿತ ಸರ್ಕಾರವು, ನಿಯೋಜಕನ ವಿರುದ್ಧ ಫಿರ್ಯಾದು ಮಾಡುವಂತೆ ನಿಯಂತ್ರಣ ಪ್ರಾಧಿಕಾರಿಯನ್ನು ಅಧಿಕೃತಗೊಳಿಸತಕ್ಕುದು; ಆ ತರುವಾಯ ನಿಯಂತ್ರಣ ಪ್ರಾಧಿಕಾರಿಯು ಅಧಿಕೃತಗೊಳಿಸುವಂಥ ದಿನಾಂಕದಿಂದ ಹದಿನೈದು ದಿನಗಳೊಳಗೆ, ಆ ಅಪರಾಧವನ್ನು ಅಧಿವಿಚಾರಣೆ ಮಾಡಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಅಂಥ ಫಿರ್ಯಾದನ್ನು ಮಾಡತಕ್ಕುದು.

(2) ಮಹಾನಗರ ಮ್ಯಾಜಿಸ್ಟ್ರೇಟ್ ಅಥವಾ ಪ್ರಥಮ ದರ್ಜೆ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕಡಿಮೆದರ್ಜೆಯ ಯಾವುದೇ ನ್ಯಾಯಾಲಯವು, ಈ ಅಧಿನಿಯಮದ ಮೇರೆಗೆ ದಂಡನೀಯವಾಗುವ ಯಾವುದೇ ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕುದಲ್ಲ.

12. ಸದ್ಭಾವನೆಯಿಂದ ಕೈಗೊಂಡ ಕಾರ್ಯದ ಸಂರಕ್ಷಣೆ:- ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ಅಥವಾ ಆದೇಶದ ಮೇರೆಗೆ , ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕೆ ಸಂಬಂಧಿಸಿದಂತೆ ನಿಯಂತ್ರಣ ಪ್ರಾಧಿಕಾರಿಯ ಅಥವಾ ಯಾವನೇ ಇತರ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಕಾನೂನು ವ್ಯವಹರಣೆಯನ್ನು ಹೂಡತಕ್ಕುದಲ್ಲ.

13. ಉಪದಾನದ ಸಂರಕ್ಷಣೆ:- ಈ ಅಧಿನಿಯಮದ ಮೇರೆಗೆ ಸಂದಾಯವಾಗಬೇಕಾದ ಯಾವುದೇ ಉಪದಾನ ಮತ್ತು 5ನೇ ಪ್ರಕರಣದ ಮೇರೆಗೆ ವಿನಾಯಿತಿ ಪಡೆದ ಯಾವುದೇ ಕಾರ್ಯಸಂಸ್ಥೆ, ಕಾರ್ಖಾನೆ, ಗಣಿ, ತೈಲಕ್ಷೇತ್ರ, ನೆಡುತೋಪು, ಬಂದರು, ರೈಲ್ವೆ ಕಂಪನಿ ಅಥವಾ ಅಂಗಡಿಯಲ್ಲಿ ನಿಯೋಜಿತನಾದ ನಿಯೋಜಿತನಿಗೆ ಸಂದಾಯವಾಗಬೇಕಾದ ಯಾವುದೇ ಉಪದಾನವು ಯಾವುದೇ ಸಿವಿಲ್, ರೆವಿನ್ಯೂ ಅಥವಾ ಕ್ರಿಮಿನಲ್ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶವನ್ನು ಅಮಲ್ಜಾರಿಗೊಳಿಸುವಲ್ಲಿ ಜಪ್ತಿಗೆ ಗುರಿಯಾಗತಕ್ಕುದಲ್ಲ.

14. ಈ ಅಧಿನಿಯಮವು ಇತರ ಅಧಿನಿಯಮಿತಿಗಳು, ಮುಂತಾದವುಗಳನ್ನು ಅಧ್ಯಾರೋಹಿಸತಕ್ಕುದು:- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮದ ಉಪಬಂಧಗಳು, ಈ ಅಧಿನಿಯಮವಲ್ಲದ ಇತರ ಯಾವುದೇ ಅಧಿನಿಯಮಿತಿಯಿಂದಾಗಿ ಪರಿಣಾಮಕಾರಿಯಾಗಿರುವ ಯಾವುದೇ ಲಿಖಿತದಲ್ಲಿ ಅಥವಾ ಕರಾರಿನಲ್ಲಿ ಅಡಕವಾಗಿರುವುದರಲ್ಲಿ ಅಸಂಗತವಾದುದು ಏನೇ ಇದ್ದಾಗ್ಯೂ, ಪರಿಣಾಮಕಾರಿಯಾಗಿರತಕ್ಕುದು.

15. ನಿಯಮ ರಚನಾಧಿಕಾರ:- (1) ಸಮುಚಿತ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಅದರ ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕುದು ಮತ್ತು ಮೇಲೆ ಹೇಳಿದ ಅಧಿವೇಶನದ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ, ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಹಾಗೆ ಮಾರ್ಪಾಟು ಹೊಂದಿದ ರೂಪದಲ್ಲಿ ಮಾತ್ರವೇ ಪರಿಣಾಮಕಾರಿಯಾಗತಕ್ಕುದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕುದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟುಮಾಡತಕ್ಕುದಲ್ಲ.

* * *